# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಸೆಪ್ಟೆಂಬರ್ 12, 2020

ಸಂಪುಟ : 47 ಸಂಚಿಕೆ : 123 ☎ 254736 91642 99999 RNI No: 27369/75 KA/SK/CTA-275/2018-2020 O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com


# ಕೊರೊನಾ ಸೋಂಕಿನ ಪ್ರವಾಹ, ಸಿಬ್ಬಂದಿಗೆ ಬರ

## ಜಿಲ್ಲಾ ಪಂಚಾಯ್ತಿ ಕೆಡಿಪಿ ಸಭೆಯಲ್ಲಿ ಅನಾವರಣಗೊಂಡ ಕೋವಿಡ್ ಚಿಕಿತ್ಸಾ ಸಮಸ್ಯೆ

ದಾವಣಗೆರೆ, ಸೆ. 11 - ಜಿಲ್ಲಾ ಕೋವಿಡ್ ಆಸ್ಪತ್ರೆಯಾದ ಸಿ.ಜಿ. ಆಸ್ಪತ್ರೆಯಲ್ಲಿ ಮೀಸಲಾಗಿ 21 ವೆಂಟಿಲೇಟರ್‌ಗಳು ಇವೆಯಾದರೂ ನಿರ್ವಹಿಸಲು ಸಿಬ್ಬಂದಿಯೇ ಇಲ್ಲ. 260 ವೈದ್ಯಕೀಯ ಸಿಬ್ಬಂದಿಯ ಅಗತ್ಯವಿದ್ದು, ಈ ಬಗ್ಗೆ ಇನ್ನೂ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಜಿಲ್ಲಾ ಪಂಚಾಯ್ತಿಯ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಜಿಲ್ಲಾ ಮಟ್ಟದ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿ ಡಾ. ರಾಘವೇಂದ್ರ ಸ್ವಾಮಿ ಹಾಗೂ ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್ ಅವರು ಈ ಮಾಹಿತಿ ನೀಡಿದರು.

ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ದೀಪಾ ಜಗದೀಶ್, ಕೊರೊನಾ ಹೋಗುವುದರ ಒಳಗೆ ಸಿಬ್ಬಂದಿ ನೇಮಕ ಮಾಡಿಕೊಳ್ಳಿ. ಆಸ್ಪತ್ರೆಯಲ್ಲಿ ಐಸಿಯು, ವೆಂಟಿಲೇಟರ್ ಇಲ್ಲ ಎಂದು ಜನರು ಆಸ್ಪತ್ರೆಗೆ ಬರಲು ಭಯ ಪಡುವಂತಾಗಿದೆ ಎಂದರು.

ಆಸ್ಪತ್ರೆಯಲ್ಲಿ ವೆಂಟಿಲೇಟರ್ ಸಿಗದೇ ಇದ್ದರೆ, ಜನರು ಖಾಸಗಿ ಆಸ್ಪತ್ರೆಯಲ್ಲಿ ದಿನಕ್ಕೆ 25 ಸಾವಿರ ರೂ. ವೆಚ್ಚ ಮಾಡಬೇಕಿದೆ. ಬಡವರು ಹಾಗೂ ಜನ ಸಾಮಾನ್ಯರಿಗೆ ನೆರವಾಗಲು ತ್ವರಿತವಾಗಿ ಸಿಬ್ಬಂದಿ (3ನೇ ಪುಟಕ್ಕೆ)

### 1,500 ಬಿಪಿಎಲ್ ಕಾರ್ಡು ರದ್ದು

ಸರ್ಕಾರಿ ನೌಕರರೂ ಸೇರಿದಂತೆ, ಅನರ್ಹರು ಬಿಪಿಎಲ್ ಕಾರ್ಡ್‌ಗಳನ್ನು ಪಡೆದಿದ್ದರೆ ವಾಪಸ್ ನೀಡುವಂತೆ ಎಚ್ಚರಿಕೆ ನೀಡಲಾಗಿತ್ತು. ಅದರಂತೆ ಕಳೆದ ಆಗಸ್ಟ್ 31ರ ಒಳಗೆ 1,500 ಜನರು (3ನೇ ಪುಟಕ್ಕೆ)

### ವೆಂಟಿಲೇಟರ್‌ಗೂ ಸೀನಿಯಾರಿಟಿ!

ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ 260 ಆಕ್ಸಿಜನ್ ಬೆಡ್‌ಗಳು, 48 ಉಸಿರಾಟದ ಸಮಸ್ಯೆಗೆ ಚಿಕಿತ್ಸೆ ನೀಡುವ ಬೆಡ್‌ಗಳು ಹಾಗೂ 10 ವೆಂಟಿಲೇಟರ್‌ಗಳಿವೆ. ಇವುಗಳೆಲ್ಲವೂ ರೋಗಿಗಳಿಗೆ ಬಳಕೆಯಾ ಗುತ್ತಿವೆ. ಹೀಗಾಗಿ ಹೊಸದಾಗಿ ತುರ್ತು ಚಿಕಿತ್ಸೆ ಬೇಕಾದವರು 'ಸೀನಿಯಾರಿಟಿ'ಗೆ (ಹಿರಿತನ) ಕಾಯಬೇಕಿದೆ.

ಬೆಡ್ ಖಾಲಿಯಾದ ಸಂದರ್ಭದಲ್ಲಿ ಜಿಲ್ಲಾ ಚಿಗಟೇರಿ ಆಸ್ಪತ್ರೆಗೆ ಯಾರು ಮೊದಲು ದಾಖಲಾಗಿರುತ್ತಾರೋ, ಅವರ ಸೀನಿಯಾರಿಟಿ ಪರಿಗಣಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಹೆಚ್.ಒ. ಡಾ. ರಾಘವೇಂದ್ರ ಸ್ವಾಮಿ, ರೋಗಿಯು ತುರ್ತು ಸ್ಥಿತಿಯಲ್ಲಿದ್ದಾಗ ಸೀನಿಯಾರಿಟಿ ಪರಿಗಣಿಸದೇ ಚಿಕಿತ್ಸೆ ನೀಡುತ್ತೇವೆ. ರೋಗಿಯ ತುರ್ತು ಸ್ಥಿತಿ ಬಗ್ಗೆ ಜಿಲ್ಲಾ ಪಂಚಾಯ್ತಿ ಸದಸ್ಯರು ತಿಳಿಸಿದಾಗಲೂ ಚಿಕಿತ್ಸೆ ಕೊಡಿಸುತ್ತಿದ್ದೇವೆ ಎಂದರು.



ಗೀಜಗನ ಗೂಡು

ಗೀಜಗ ತನ್ನ ಗೂಡು ಕಟ್ಟುವುದು ನೋಡುವುದೇ ಸೋಜಿಗ. ನೇಯ್ಗೆ ಹಕ್ಕಿ ಎಂತಲೂ ಕರೆಯಲ್ಪಡುವ ಗೀಜಗ ಸಾಮಾನ್ಯವಾಗಿ ಮೇ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೂ ಗೂಡುಗಳನ್ನು ಕಟ್ಟುತ್ತದೆ. ಈ ಅವಧಿ ಮುಂಗಾರು ಮಳೆಗಾಲಕ್ಕೂ ಭತ್ತದ ಅಥವಾ ದವಸಗಳ ಕೊಯ್ಲಿಗೂ ಹೊಂದಿಕೊಳ್ಳುತ್ತದೆ.

ಸಾಧಾರಣವಾಗಿ ನದಿ, ಕೆರೆ ನೀರಿನ ಮೇಲೆ ಬಾಗಿರುವ ಮರದ ರೆಂಬೆಗಳ, ಈಚಲು ಗರಿಗಳ ತುದಿಯಲ್ಲಿ ಇಲ್ಲವೆ ನೀರಿನಲ್ಲಿ ಬೆಳೆಯುವ ಜೋಡುಗಳ ಮಧ್ಯೆ ಗೂಡನ್ನು ನಿರ್ಮಿಸುತ್ತವೆ. ಗೂಡುಗಳ ನಿರ್ಮಾಣಕ್ಕೆ ಭತ್ತದ ಹುಲ್ಲುಗಳನ್ನು ಬಳಸುತ್ತವೆ. ತಮ್ಮ ಕೊಕ್ಕು, ಕಾಲುಗಳನ್ನು ಕುಶಲತೆ ಯಿಂದ ಬಳಸುತ್ತಾ ಗೂಡು ನಿರ್ಮಿಸು ವುದು ನೋಡಲು ಬಲು ಚೆನ್ನ. ದಾವಣಗೆರೆ ಸಮೀಪದ ಆವರಗೆರೆ ಕೆರೆ ಬಳಿಯ ಚಿತ್ರವಿದು.

# ಹರಿಹರ: ಮಳೆಗೆ ಹೆಚ್ಚು ಬೆಳೆ ಹಾನಿ

ಹರಿಹರ, ಸೆ.11- ತಾಲ್ಲೂಕಿನಲ್ಲಿ ಕಳೆದ ಹಲವಾರು ದಿನಗಳಿಂದ ಸುರಿಯುತ್ತಿರುವ ಮಳೆಯು ತಾಲೂಕಿ ನಾದ್ಯಂತ ಮಲೇಬೆನ್ನೂರು 48.8, ಕೊಕ್ಕನೂರು 35.2, ಸಿರಿಗೆರೆ 50.02, ಒಟ್ಟು 148.2 ಸೆಂಟಿಮೀಟರ್ ಮಳೆಯಾಗಿದ್ದು, ಕಳೆದ ವಾರದ ಸರಾಸರಿ 37.05 ಮಳೆಯಾಗಿದೆ. ಇದರ ಪರಿಣಾಮ ವಾಗಿ ತಾಲ್ಲೂಕಿನಾದ್ಯಂತ ಹಲವಾರು ಎಕರೆ ಪ್ರದೇಶದಲ್ಲಿ ಬೆಳೆ ಹಾನಿಯಿಂದ ರೈತರ ಬದುಕು ದುಸ್ತರವಾಗಿದೆ.

ಮಂಗಳವಾರ ರಾತ್ರಿ ಸುರಿದ ಮಳೆಯಿಂದ ಬೆಳ್ಳೂಡಿ, ರಾಮತೀರ್ಥ, ಭಾನುವಳ್ಳಿ, ಬ್ಯಾಲದಹಳ್ಳಿ ಸೇರಿದಂತೆ ಇತರೆ ಗ್ರಾಮಗಳ ಸಮೀಪ ಕೆಲವು ರಸ್ತೆಗಳ ಸಂಪರ್ಕ ಕಡಿತವಾಗಿದ್ದು, ಹೊಸದಾಗಿ ಕಟ್ಟಿದ ಬೆಳ್ಳೂಡಿ ಸೇತು ವೆಯು ಕುಸಿದಿದೆ. (2ನೇ ಪುಟಕ್ಕೆ)



ದೇವರಬೆಳಕೆರೆ ಗ್ರಾಮದ ಡ್ಯಾಂ ಹಿನ್ನೀರು ಭತ್ತದ ನಾಟಿಗೆ ನುಗ್ಗಿರುವುದರಿಂದ ಗುಳದಹಳ್ಳಿ ಮತ್ತು ಸಂಕ್ಲೀಪುರ ಗ್ರಾಮದ ಸುಮಾರು 60 ಎಕರೆ ಪ್ರದೇಶದಲ್ಲಿ ಭತ್ತದ ಹಾನಿ ಸಂಭವಿಸಿದೆ

- ವಿ.ಪಿ. ಗೋವರ್ಧನ್, ಕೃಷಿ ಅಧಿಕಾರಿ

## ನಗರದಲ್ಲಿ ನಾಳೆ ರಾಜ್ಯದ ಎಪಿಎಂಸಿ ಅಧ್ಯಕ್ಷರ ಸಭೆ

ದಾವಣಗೆರೆ, ಸೆ. 11 – ಎಪಿಎಂಸಿ ಕಾಯ್ದೆಗೆ ತಂದಿರುವ ತಿದ್ದುಪಡಿಗಳನ್ನು ಮಾರ್ಪಾಡು ಮಾಡಬೇಕೆಂಬುದು ಮನವಿ ಸಲ್ಲಿಸುವ ಕುರಿತು ಚರ್ಚಿಸಲು ನಗರದ ಎಪಿಎಂಸಿಯ ಟೆಂಡರ್ ಹಾಲ್‌ನಲ್ಲಿ ರಾಜ್ಯದ ಎಲ್ಲಾ ಸಮಿತಿಗಳ ಅಧ್ಯಕ್ಷರ ಸಭೆಯನ್ನು ಕರೆಯಲಾಗಿದೆ. ಅಂದು ಮಧ್ಯಾಹ್ನ 3 ಗಂಟೆಗೆ ಸಭೆ ನಡೆಯಲಿದೆ ಎಂದು ದಾವಣಗೆರೆ ಎಪಿಎಂಸಿ ಅಧ್ಯಕ್ಷ (3ನೇ ಪುಟಕ್ಕೆ)

## ಭದ್ರಾ ಡ್ಯಾಂ ಭರ್ತಿ ಸಂಭವ: ಎಚ್ಚರಿಕೆ

ದಾವಣಗೆರೆ, ಸೆ.11- ಹೆಚ್ಚಿನ ಮಳೆ ಹಿನ್ನೆಲೆಯಲ್ಲಿ ಭದ್ರಾ ಜಲಾಶಯ ಗರಿಷ್ಠ ನೀರಿನ ತಲುಪುವ ಸಂಭವವಿದ್ದು, ಯಾವುದೇ ಸಮ ಯದಲ್ಲಿ ಸ್ಪಿಲ್ ವೇ ಗೇಟ್ ಮೂಲಕ ನದಿಗೆ, ಬಲದಂಡೆ ನಾಲೆ, ಎಡದಂಡೆ ನಾಲೆಗಳಲ್ಲಿ ಹೆಚ್ಚು ವರಿ ನೀರನ್ನು ಹರಿ ಬಿಡಲಾಗುವುದು. ಸಾರ್ವ ಜನಿಕರು ಎಚ್ಚರಿಕೆ ವಹಿಸುವಂತೆ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

## ನಕಲಿ ಚೆಕ್‌ಗಳ ಮೂಲಕ ರಾಮ ಮಂದಿರ ಟ್ರಸ್ಟ್‌ಗೆ 6 ಲಕ್ಷ ರೂ. ವಂಚನೆ

ಅಯೋಧ್ಯೆ, ಸೆ. 11 – ಎರಡು ನಕಲಿ ಚೆಕ್‌ಗಳ ಮೂಲಕ ರಾಮ ಮಂದಿರ ಟ್ರಸ್ಟ್‌ನ 6 ಲಕ್ಷ ರೂ.ಗಳನ್ನು ಬಿಡಿಸಿಕೊಂಡ ಅನಾಮಿಕ ವ್ಯಕ್ತಿಗಳ ವಿರುದ್ಧ ಉತ್ತರ ಪ್ರದೇಶ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಮೂರನೇ ನಕಲಿ ಚೆಕ್ ಮೂಲಕ 10 ಲಕ್ಷ ರೂ. ಬಿಡಿಸಿಕೊಳ್ಳುವ ಯತ್ನ ನಡೆಸುವಾಗ, ಎಚ್ಚರಿಕೆ ವಹಿಸಿದ್ದರಿಂದ ಪ್ರಯತ್ನ ವಿಫಲವಾಗಿತ್ತು.

ಟ್ರಸ್ಟ್ ಕಾರ್ಯದರ್ಶಿ ಹಾಗೂ ವಿ.ಹೆಚ್.ಪಿ. ನಾಯಕ ಚಂಪತ್ ರಾಯ್ ಅವರು ನೀಡಿದ ದೂರನ್ನು ಆಧರಿಸಿ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಯಾವ ಖಾತೆಗೆ ಹಣ ವರ್ಗಾವಣೆಯಾಗಿತ್ತೋ, ಅದನ್ನು ನಾವು ಸ್ಥಗಿತಗೊಳಿಸಿದ್ದೇವೆ. ಹಣವನ್ನು ಮಹಾರಾಷ್ಟ್ರಕ್ಕೆ ರವಾನಿಸಲಾಗಿತ್ತು. ಹೀಗಾಗಿ ಪೊಲೀಸ್ ತಂಡಗಳನ್ನು ಲಖ್ನೌ ಹಾಗೂ ಮುಂಬೈಗಳಿಗೆ ರವಾನಿಸಲಾಗಿದೆ ಎಂದು ಡಿಐಜಿ ದೀಪಕ್ ಕುಮಾರ್ ತಿಳಿಸಿದ್ದಾರೆ.

ವಂಚನಾತ್ಮಕವಾಗಿ ಹಣ ಪಡೆದುಕೊಂಡವರು, ಖಾತೆಯಿಂದ 4 ಲಕ್ಷ ರೂ. ಬಿಡಿಸಿಕೊಂಡಿದ್ದಾರೆ. ಎರಡು ಲಕ್ಷ ರೂ. ಇನ್ನೂ ಖಾತೆಯಲ್ಲಿದೆ ಎಂದವರು ತಿಳಿಸಿದ್ದಾರೆ. ಸೆಪ್ಟೆಂಬರ್ 1ರಂದು ಎಸ್.ಬಿ.ಐ. ಖಾತೆಯಿಂದ (3ನೇ ಪುಟಕ್ಕೆ)

## ಹರಿಹರ, ಹೊನ್ನಾಳಿ, ನ್ಯಾಮತಿ ಪ್ರವಾಹ ಪೀಡಿತ

ದಾವಣಗೆರೆ, ಸೆ. 3 – ಜಿಲ್ಲೆಯ ಮೂರು ತಾಲ್ಲೂಕು ಪ್ರವಾಹ ಪೀಡಿತ ಎಂದು ಘೋಷಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಆಗಸ್ಟ್ ತಿಂಗಳಲ್ಲಿ ಸುರಿದ ಧಾರಾಕಾರ ಮಳೆ ಹಾಗೂ ಪ್ರವಾಹವನ್ನು ಪರಿಗಣಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಅದರಂತೆ ಜಿಲ್ಲೆಯ ಹರಿಹರ, ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕುಗಳು ಪ್ರವಾಹ ಪೀಡಿತ ಜಿಲ್ಲೆಗಳ ಪಟ್ಟಿಗೆ ಸೇರ್ಪಡೆಯಾಗಿವೆ.

## ಅಭ್ಯರ್ಥಿಗಳ ಅಪರಾಧಿಕ ಹಿನ್ನೆಲೆ ಜಾಹೀರಾತಿಗೆ ಮಿತಿ

ನವದೆಹಲಿ, ಸೆ. 11 – ಅಭ್ಯರ್ಥಿಗಳ ಅಪರಾಧಿಕ ಹಿನ್ನೆಲೆ ಯನ್ನು ಜಾಹೀರಾತುಗಳ ಮೂಲಕ ಪ್ರಕಟಿಸುವ ನಿರ್ಬಂಧ ಕಠಿಣಗೊಳಿಸಿ ರುವ ಚುನಾವಣಾ ಆಯೋಗ, ಈ ಜಾಹೀರಾತುಗಳಿಗೆ ಕಾಲ ಮಿತಿ ನಿಗದಿ ಪಡಿಸಿದೆ.

ನಾಮಪತ್ರ ವಾಪಸ್ ಪಡೆಯಲು 8 ಮತ್ತು 4 ದಿನಗಳಿರು ವಾಗ ಎರಡು ಜಾಹೀರಾತುಗಳನ್ನು ಪ್ರಕಟಿಸಬೇಕು. ನಂತರ ಕೊನೆಯ ಜಾಹೀರಾತನ್ನು ಮತದಾನಕ್ಕೆ ಎರಡು ದಿನ ಮುಂಚೆ ಪ್ರಕಟಿಸಬೇಕು ಎಂದು ಆಯೋಗ ಹೇಳಿದೆ. ಅವಿರೋಧವಾಗಿ ಆಯ್ಕೆಯಾ ಗುವ ಅಭ್ಯರ್ಥಿಗಳೂ ಸಹ ಅಪರಾಧಿಕ ಹಿನ್ನೆಲೆ ಕುರಿತು ಜಾಹೀರಾತು ಪ್ರಕಟಿಸಬೇಕು. ಅಲ್ಲದೇ ಈ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವ ರಾಜಕೀಯ ಪಕ್ಷಗಳೂ ಜಾಹೀರಾತು ನೀಡಬೇಕಿದೆ.

# ಕಾಂಗ್ರೆಸ್ : ಹುದ್ದೆಯಿಂದ ಖರ್ಗೆ ಹೊರಕ್ಕೆ



ನವದೆಹಲಿ, ಸೆ. 11 – ಮಲ್ಲಿಕಾರ್ಜುನ ಖರ್ಗೆ, ಗುಲಾಂ ನಬಿ ಆಜಾದ್, ಮೋತಿಲಾಲ್ ವೋರಾ, ಅಂಬಿಕಾ ಸೋನಿ ಅವರನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ತೆಗೆದು ಹಾಕಿದ್ದಾರೆ.

ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿಯನ್ನು ಪುನರ್‌ರಚಿಸಿರುವ ಅವರು, ಪಿ.ಚಿದಂಬರಂ, ರಣದೀಪ್ ಸುರ್ಜೇವಾಲಾ, ತಾರಿಕ್ ಅನ್ವರ್ ಹಾಗೂ ಜಿತೇಂದ್ರ ಸಿಂಗ್ ಅವರನ್ನು ಸಾಮಾನ್ಯ ಸದಸ್ಯರಾಗಿ ನೇಮಿಸಿದ್ದಾರೆ.

ಲ್ಯೂಜಿನ್ಹೋ ಫಲೇರೋ ಸಹ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹುದ್ದೆ ಕಳೆದುಕೊಂಡಿದ್ದಾರೆ. ಇದೇ ವೇಳೆ ಪಕ್ಷದ ವ್ಯವಹಾರಗಳಲ್ಲಿ ತಮಗೆ ಸಹಕರಿಸಲು ವಿಶೇಷ ಸಮಿತಿಯೊಂದನ್ನೂ ಸಹ ಸೋನಿಯಾ ರಚಿಸಿದ್ದಾರೆ.

ಸೋನಿಯಾರಿಗೆ ಸಹಕರಿಸಲು ರೂಪಿಸಲಾದ ಸಮಿತಿಯಲ್ಲಿ ಎ.ಕೆ. ಆಂಟನಿ, ಅಹಮದ್ ಪಟೇಲ್, ಅಂಬಿಕಾ ಸೋನಿ, ಕೆ.ಸಿ. ವೇಣುಗೋಪಾಲ್, ಮುಕುಲ್ ವಾಸ್ನಿಕ್ ಹಾಗೂ ರಣದೀಪ್ ಸುರ್ಜೇವಾಲಾ ಅವರಿದ್ದಾರೆ.

ಸುರ್ಜೇವಾಲಾ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಿದ್ದು, ಕರ್ನಾಟಕದ ಉಸ್ತುವಾರಿಯನ್ನೂ ನೀಡಲಾಗಿದೆ.

ಇದುವರೆಗೂ ಕೆ.ಸಿ. ವೇಣುಗೋಪಾಲ್ ಅವರು ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿದ್ದರು. ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ವೇಣುಗೋಪಾಲ್ ಅಧಿಕಾರ ವಹಿಸಿಕೊಂಡಿದ್ದರು.

ಇದೇ ವೇಳೆ, ಮಹಾರಾಷ್ಟ್ರ ಕಾಂಗ್ರೆಸ್ ಉಸ್ತುವಾರಿಯಾಗಿ ಹೆಚ್.ಕೆ. (3ನೇ ಪುಟಕ್ಕೆ)

**ಕರ್ನಾಟಕ ಕಾಂಗ್ರೆಸ್ ಉಸ್ತುವಾರಿಯಾಗಿ ಸುರ್ಜೇವಾಲಾ**

**ಮಹಾರಾಷ್ಟ್ರಕ್ಕೆ ಹೆಚ್.ಕೆ. ಪಾಟೀಲ್,**

**ತಮಿಳುನಾಡಿಗೆ ದಿನೇಶ್ ಗುಂಡೂರಾವ್ ಉಸ್ತುವಾರಿ**

## ಕೊರೊನಾ : ಅನ್ಯ ದೇಶಗಳಿಗಿಂತ ಭಾರತದಲ್ಲೇ ಸಾವು ಹೆಚ್ಚು?

ನವದೆಹಲಿ, ಸೆ. 11 – ಭಾರತದಲ್ಲಿ ಕೊರೊನಾದಿಂದ ಸಾವನ್ನಪ್ಪುತ್ತಿರುವವರ ಪ್ರಮಾಣ ಮುಂದುವರೆದ ದೇಶಗಳಿಗೆ ಹಾಗೂ ಇಡೀ ವಿಶ್ವದ ಸರಾಸರಿಗೆ ಹೋಲಿಸಿದರೆ ಕಡಿಮೆ ಇದೆ ಎಂದು ಕೇಂದ್ರ ಸರ್ಕಾರ ತಿಳಿಸುತ್ತಾ ಬಂದಿದೆ. ಆದರೆ, ಸಾವಿನ ಅಳತೆಯ ಈ ಮಾನದಂಡ ಸೂಕ್ತವೇ ಎಂಬ ಪ್ರಶ್ನೆ ಎದುರಾಗಿದೆ. ಸಾವಿನ ಪ್ರಮಾಣವನ್ನು ಅಳೆಯುವಾಗ ಆ ದೇಶಗಳಲ್ಲಿನ ವಯೋಮಾನವನ್ನೂ ಪರಿಗಣಿಸಬೇಕು ಎಂದು ಇತ್ತೀಚಿನ ಅಧ್ಯಯನಯವೊಂದು ಹೇಳಿದೆ.

ಅಮೆರಿಕದ ನ್ಯಾಷನಲ್ ಬ್ಯೂರೋ ಆಫ್ ಎಕನಾಮಿಕ್ ರೀಸರ್ಚ್, ನ್ಯೂಯಾರ್ಕ್ ವಿವಿಗಳು ಭಾರತ ಹಾಗೂ ಇತರೆ 14 ದೇಶಗಳ ಸಾವಿನ ದರವನ್ನು ವಯೋಮಾನವನ್ನು ಪರಿಗಣಿಸಿ ಲೆಕ್ಕ ಹಾಕಿವೆ.






## 3ನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಮತಿ ರೇಣುಕಾ ಪಿ.ಆರ್. ನಾಗರಾಜ್

ಮರಣ : 12-9-2017

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ

ದುಃಖತಪ್ತರು : ಪಿ.ಆರ್. ನಾಗರಾಜ್‌ರಾವ್,

ಮಕ್ಕಳಾದ : ಪಿ.ಎನ್. ತುಕಾರಾಮ್, ಪಿ.ಎನ್. ಕುಮಾರ್, ಪಿ.ಎನ್. ಶ್ರೀಧರ್, ಪಿ.ನ್. ರಾಜೇಶ್ವರಿ

ಸೊಸೆಯಂದಿರು : ಮಹಾಲಕ್ಷ್ಮಿ, ಸೌಮ್ಯ, ಕವಿತಾ

ಮೊಮ್ಮಕ್ಕಳಾದ : ತರುಣ್, ತನುಶ್ರೀ, ಉಲ್ಲಾಸ್, ದಿವ್ಯಾ, ಪಾರ್ಥ ವಿನಾಯಕ

|| ಶ್ರೀ ಭೈರಸಿದ್ದೇಶ್ವರ ಪ್ರಸನ್ನ || || ಓಂ ಶ್ರೀ ಸಾಯಿರಾಂ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜಗಳೂರು ತಾಲ್ಲೂಕು ಅಸಗೋಡು ಗ್ರಾಮದ ವಾಸಿ ಶ್ರೀಮತಿ ಕಡೇಮನೆ ಸಾವಿತ್ರಮ್ಮ ಮತ್ತು ಮಕ್ಕಳು ಇವರುಗಳು ಮಾಡುವ ವಿಜ್ಞಾಪನೆಗಳು.

ದಿನಾಂಕ 01.09.2020ರ ಮಂಗಳವಾರ ಬೆಳಗಿನ ಜಾವ 12.15 ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಕಡೇಮನೆ ಲೋಕನಾಥಪ್ಪನವರು**

(ನಿವೃತ್ತ ಮುಖ್ಯೋಪಾಧ್ಯಾಯರು)

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 13.09.2020ನೇ ಭಾನುವಾರ ಮಧ್ಯಾಹ್ನ 12.30ಕ್ಕೆ ಜಗಳೂರು ತಾಲ್ಲೂಕು ಅಸಗೋಡು ಗ್ರಾಮದ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ದಿ.ಶ್ರೀ ಕಡೇಮನೆ ಹನುಮಂತಪ್ಪನವರ ಧರ್ಮಪತ್ನಿ ಶ್ರೀಮತಿ ಸಾವಮ್ಮ ಮತ್ತು ಮಕ್ಕಳು.
ದಿ.ಶ್ರೀ ಕಡೇಮನೆ ಲೋಕನಾಥಪ್ಪನವರ ಧರ್ಮಪತ್ನಿ ಶ್ರೀಮತಿ ಸಾವಿತ್ರಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಬಂಧು-ಮಿತ್ರರು.
ಮೊ: 94481 50010

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

ಕಮರ್ಷಿಯಲ್ ಸೈಟ್, ಸೆಮಿ ಕಮರ್ಷಿಯಲ್, ಕಾಂಪ್ಲೆಕ್ಸ್ ಸೇಲ್ ಗೆ (ಬಾಡಿಗೆ ಬರುವಂತಹ)
30x40 ಕಾಂಪ್ಲೆಕ್ಸ್, 30x40 ಸೈಟು, 20x50 ಕಾಂಪ್ಲೆಕ್ಸ್, 40x60 ಸೈಟು, 60x50 ಕಾಂಪ್ಲೆಕ್ಸ್, 30x50 ಸೈಟು, 33x60 ಸೈಟು, 60x45 ಸೈಟು. ಕಾಂಪ್ಲೆಕ್ಸ್ ಬೇಕೇ ಕಾಂಪ್ಲೆಕ್ಸ್ ಕಟ್ಟುವ ಸೈಟ್ ಬೇಕೇ ? ವಿಚಾರಿಸಿ.
ಬೂಸ್ನೂರ್ ಕಿರಣ್ (ಏಜೆಂಟ್)
97315-63409, 98440-63409

ನಿಜಲಿಂಗಪ್ಪ ಬಡಾವಣೆಯಲ್ಲಿ ಸೈಟುಗಳು ಮಾರಾಟಕ್ಕಿವೆ
40x60 South, 30x50 South, 30x50 North West Corner. 40x60 South.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166-12110, 93410-14130

ಸೈಟುಗಳು ಮಾರಾಟಕ್ಕಿವೆ
ಶಿವಕುಮಾರಸ್ವಾಮಿ ಬಡಾವಣೆಯಲ್ಲಿ 30x40 ಪೂರ್ವ, ರಶ್ಮಿ ಹಾಸ್ಟೆಲ್ ಹಿಂಭಾಗದಲ್ಲಿ ಹೊಸ ಲೇಔಟ್ ನಲ್ಲಿ 30x56 ಪೂರ್ವ.
ಮಂಜುನಾಥ, ಏಜೆಂಟ್
98444-91792

ಮನೆ ಕಟ್ಟಿಕೊಡಲಾಗುವುದು
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್‌ನಲ್ಲಿ ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

ಬೇಕಾಗಿದ್ದಾರೆ
ಖಾನಾವಳಿಯಲ್ಲಿ ಅಡುಗೆ ಕೆಲಸ ಮಾಡಲು ಮತ್ತು ಸಪ್ಲೈ ಮಾಡಲು ಪುರುಷ / ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ: 91106 03451

ಮಾರಾಟಕ್ಕೆ
S.S ಲೇಔಟ್ ಮನೆ-30×40(35 ಸಾವಿರ ಬಾಡಿಗೆ ಬರುವಂತಹ ಮನೆ) ಕೊಟ್ಟೂರೇಶ್ವರ ಬಡಾವಣೆ ಮನೆ-20×35, ಮೇಡಂ ಲೇಔಟ್ ಮನೆ 30×40, ಡಿಸಿಎಂ ಟೌನ್ ಮನೆ-40×50 ರವೀಂದ್ರನಾಥ ಬಡಾವಣೆ ಸೈಟ್-30×50, KHB ಸೈಟ್ - 30×40, ಬನಶ್ರೀ ಲೇಔಟ್ ಸೈಟ್ (ಶ್ಯಾಮನೂರು) 30×40, 30×42 (ಸೈಟ್ ದರ ಹಳೆಯ ಆರ್ ಸಿ ಸಿ ಮನೆ ನಿಟುವಳ್ಳಿ ಹೊಸ ಬಡಾವಣೆ)
ಸಂಪರ್ಕಿಸಿ: 7899636597
9916525828

ಸೈಟುಗಳು ಮಾರಾಟಕ್ಕಿವೆ
ವಾಜಪೇಯಿ ಲೇಔಟ್ ನಲ್ಲಿ, ಶಿವ ಪಾರ್ವತಿ ಲೇಔಟ್ ನಲ್ಲಿ 30x40, 30x40 East ಅಕ್ಕಪಕ್ಕ. 30x40, 30x40 West ಅಕ್ಕಪಕ್ಕ. 40x50 East South Corner.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166-12110, 93410-14130

ಮನೆ ಬಾಡಿಗೆಗೆ ಇದೆ
ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ 11ನೇ ಮೇನ್, 2ನೇ ಕ್ರಾಸ್‌ನಲ್ಲಿ (#3259/1) ಮೊದಲನೇ ಮಹಡಿಯಲ್ಲಿ 2BHK ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ:
94489 23946

ಮನೆ ಬಾಡಿಗೆಗೆ/ಲೀಜ್‌ಗೆ
1 BHK, 2 BHK, 3 BHK
ರುದ್ರೇಶ್, ಏಜೆಂಟರು
87226 08529

ವರ ಬೇಕಾಗಿದೆ
27 ವರ್ಷದ ಭೋವಿ ಜಾತಿಯ ಬಿ.ಎ. ಓದಿರುವ ವಧುವಿಗೆ ವರ ಬೇಕಾಗಿದೆ.
ಸಂಪರ್ಕಿಸಿ :
99169 31407

ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

ದಾವಣಗೆರೆಯಿಂದ 10 km ದೂರ 2 ಎಕರೆ ನೀರಾವರಿ ಜಮೀನು @ Rs 21 ಲಕ್ಷ/ಎಕರೆ
74112 50447

ಮನೆ ಬಾಡಿಗೆಗೆ ಇದೆ
ಬನಶಂಕರಿ ಬಡಾವಣೆ ಹಿಂಭಾಗ, ನೂತನವಾಗಿ ಕಟ್ಟಿಸಿರುವ ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
98804 40541
99644 14243

ಬೇಕಾಗಿದ್ದಾರೆ
ಸಮಾಜ ಸೇವೆ ಮಾಡಲು ಆಸಕ್ತಿ ಇರುವ ಅತ್ಯಂತ ಉತ್ಸಾಹಿ ವಿವಾಹಿತ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕರುಣಾ ಜೀವ ಕಲ್ಯಾಣ ಟ್ರಸ್ಟ್
ಸಂಪರ್ಕಿಸಿ : 83105 20002

ಬೇಕಾಗಿದ್ದಾರೆ
ಬೆಳಿಗ್ಗೆ 8.30ರಿಂದ ಸಂಜೆ 5.30ರವರೆಗೆ ವಯಸ್ಸಾದವರನ್ನು ನೋಡಿಕೊಂಡು ಮನೆ ಕೆಲಸ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಸಂಪರ್ಕಿಸಿ :
63639-54459

ಮನೆ ಬಾಡಿಗೆಗೆ ಇದೆ
ನಂ. 109/1, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿ, ಮೊದಲನೇ ಮಹಡಿಯಲ್ಲಿ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
63661 92815
63661 92835
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

2 ಮನೆ ಹಾಗೂ ಆಫೀಸ್ ಮಳಿಗೆ ಬಾಡಿಗೆಗೆ ಇದೆ
ದಾವಣಗೆರೆ ವಿಜಯಲಕ್ಷ್ಮಿ ರಸ್ತೆಯಲ್ಲಿ 2ನೇ ಮಹಡಿಯಲ್ಲಿ 2 ಬೆಡ್ ರೂಂನ ಮನೆ ಹಾಗೂ 1 ಬೆಡ್ ರೂಂ ನ ಮನೆ ಮತ್ತು 18x12 ಅಳತೆಯ ಆಡಿಟರ್, ಲಾಯರ್, ಫೈನಾನ್ಸ್‌ಗೆ ಸೂಕ್ತವಾದ ಆಫೀಸ್ ಬಾಡಿಗೆಗೆ ಇದೆ.
98863 20025, 98860 97065

ISI ಹೊಂದಿರುವ Vega Helmet ಹೋಲ್‌ಸೇಲ್ ದರದಲ್ಲಿ ದೊರೆಯುತ್ತದೆ.
ಕಿರಣ್ ಜನರಲ್ ಸ್ಟೋರ್
ಮಂಡಿಪೇಟೆ, ಎಂ.ಜಿ. ರೋಡ್, ಭವಾನಿ ಬುಕ್ ಡಿಪೋ ಕೆಳಗಡೆ, ದಾವಣಗೆರೆ.

TO-LET
2 BHK House, 1st floor B.T. Galli Chowdambika Road, Davanagere.
Conatact: 97392 65666
(Veg Only)

ಮನೆ ಬಾಡಿಗೆಗೆ ಇದೆ
2 ಬೆಡ್ ರೂಂ, ಪೂರ್ವ, ಗ್ರೌಂಡ್ ಫ್ಲೋರ್ ಮನೆ ಮೊದಲನೇ ಮಹಡಿಯಲ್ಲಿ ಪೂರ್ವ ಎಸ್.ಎಸ್. ಬಡಾವಣೆ ಎ ಬ್ಲಾಕ್ (ಆಫೀಸ್ ಗೆ ಅನುಕೂಲವಾಗಿದೆ)
ನಾಗಭೂಷಣ : 92422-20342

ಶಿಕ್ಷಕಿಯರು ಬೇಕಾಗಿದ್ದಾರೆ
B.Sc, B.Ed.-6, M.Sc. B.Ed.-2
B.A., B.Ed. - 6 (Eng. Major 2)
M.A., B.Ed.-4, TCH/D.Ed.-5
ACM SCHOOL
Devaraja Urs Lay-out, C Block, 2nd Cross, Davangere.
89703 21855, 81057 54995

ಸೈಟು ಮಾರಾಟಕ್ಕಿದೆ
ಶ್ರೀ ಗುರು ಬಕ್ಕೇಶ್ವರ ಬಡಾವಣೆ (ಸಿದ್ದೇಶ್ವರ ಮಿಲ್ ಹಿಂಭಾಗ) ಹೊಸ ಬಸ್‌ಸ್ಟ್ಯಾಂಡ್ ಹಿಂಭಾಗ 32×51 ಅಳತೆ, ಉತ್ತರ ದಿಕ್ಕಿನ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
9341214372, 9448407745

ಬೇಕಾಗಿದ್ದಾರೆ
1) Cashier
2) Salesman / Sales Girls
ಸಂಪರ್ಕಿಸಿ :
ಗಂಗಾವತಿ ಸ್ಕಿಲ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

ಬೇಕಾಗಿದ್ದಾರೆ
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ.
ಮಹಿಳಾ ಸ್ವೀಪರ್ ಬೇಕಾಗಿದ್ದಾರೆ.
63639-54459

REQUIRED
Young Males with Fluency in English & Hindi and Female Receptionist.
Send your resume with recent photograph.
SKV47097@GMAIL.COM
90711 06106

ರೂಂ ಬಾಡಿಗೆಗೆ ದೊರೆಯುತ್ತದೆ
ಜಯನಗರ 'ಎ' ಬ್ಲಾಕ್, ಕಾಳಿದಾಸ ಸರ್ಕಲ್ ಹತ್ತಿರ 12x12 ವಿಸ್ತೀರ್ಣದ ಫರ್ನೀಚರ್ ಸೌಲಭ್ಯದ ರೂಂ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ:
94484 39639
63665 96479

ಬೇಕಾಗಿದ್ದಾರೆ
ಹೋಟೆಲ್ ಬಂಡೆ ದೋಸೆ ಭಟ್ರು ಬೇಕಾಗಿದ್ದಾರೆ ಹಾಗೂ ಸಪ್ಲೆಯರ್ಸ್ ಬೇಕಾಗಿದ್ದಾರೆ.
95130 33363

House for Rent
1 BHK, Behind KSRTC Bus Stand, Beside Veena Clinic, Bhagathsing Nagar, Davangere.
93410-95651
99161-79106

ಅಧಿಕೃತ ಚೀಟಿ ಸಂಸ್ಥೆ
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

ಮನೆ ಲೀಸ್ ಗೆ ಇದೆ
ಬಸವೇಶ್ವರ ಬಡಾವಣೆ, ಸಾಯಿ ಇಂಟರ್ ನ್ಯಾಷನಲ್ ಹೋಟೆಲ್ ಹಿಂಭಾಗ, ಪಿ.ಬಿ. ರಸ್ತೆಯಲ್ಲಿರುವ ಗ್ರೌಂಡ್ ಫ್ಲೋರ್ 2 ಬೆಡ್ ರೂಂ, ಮೊದಲನೇ ಮಹಡಿ 2 ಬೆಡ್ ರೂಂ, 2ನೇ ಮಹಡಿ 2 ಬೆಡ್ ರೂಂ ವುಳ್ಳ ಮನೆ ಲೀಸ್ ಗೆ ಇದೆ. ಆಸಕ್ತರು ಸಂಪರ್ಕಿಸಿ :
76766-16044

ಭೂಮಿಕಾ ಮ್ಯಾಟ್ರಿಮೊನಿ
ಲಿಂಗಾಯತ ವಧು-ವರರ ಕೇಂದ್ರ
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

ಹೆಸರು ಬದಲಾವಣೆ
ಶ್ರೀ ರಾಮ ಬಾಬು ಸಹಾನಿ ತಂದೆ ಲಾಲು ಸಹಾನಿ, # ವಿನಾಯಕ ನಗರ, ದಾವಣಗೆರೆ ಸಿಟಿ, ವಾಸಿಯಾದ ನಾನು ಮತ್ತು ನನ್ನ ತಂದೆಯ ಹೆಸರು ಎಲ್ಲಾ ಮೂಲ ದಾಖಲಾತಿಗಳಲ್ಲಿ ಈ ಮೇಲ್ಕಂಡಂತೆ ಇದೆ ಆದರೆ ನನ್ನ ಡಿ.ಎಲ್.ನಲ್ಲಿ ರಾಮಬಾಬು ಸ್ವಾಮಿ ತಂದೆ ಲಾಲು ಸ್ವಾಮಿ ಎಂದು ತಪ್ಪಾಗಿ ನಮೂದಾಗಿದೆ ಆದ್ದರಿಂದ ದಿನಾಂಕ 9.9.2020 ರಂದು ನೋಟರಿ ದಾವಣಗೆರೆಯವರ ಮುಂದೆ ನನ್ನ ಹೆಸರು ಶ್ರೀ ರಾಮಬಾಬು ಸಹಾನಿ ತಂದೆ ಲಾಲು ಸಹಾನಿ ಎಂದು ದೃಢೀಕರಿಸಿದ್ದೇನೆ.
-ಶ್ರೀ ರಾಮ ಬಾಬು ಸಹಾನಿ

ಶ್ರೀ ಮಂಜುನಾಥ ಸ್ವಾಮಿ ಜೋತಿಷ್ಯರು
ಪಂಡಿತ್ ಮಂಜುನಾಥ ಭಟ್
ಇವರು ರಾಜ್ಯದಲ್ಲಿ ನಂ 1 ವಶೀಕರಣ ಸ್ಪೆಷಲಿಸ್ಟ್, (ಸ್ತ್ರೀ-ಪುರುಷ ವಶೀಕರಣ ಕೇವಲ 3 ದಿನದಲ್ಲಿ ಪರಿಹಾರ ಮಾಡುತ್ತಾರೆ) ವಿದ್ಯೆ, ಉದ್ಯೋಗ, ಆರೋಗ್ಯ, ಮಾಟ ಮಂತ್ರ ನಿಮ್ಮ ಯಾವುದೇ ಸಮಸ್ಯೆ ಇದ್ದರೆ ಅತೀ ಶೀಘ್ರ ಪರಿಹಾರ ಶತಸಿದ್ಧ. ಕೊಳ್ಳೆಗಾಲ, ಕೇರಳ ರೀತಿಯಲ್ಲಿ ಪರಿಹಾರ ತಿಳಿಸುತ್ತಾರೆ.
94497 96933

ಮನೆ/ರೂಂ ಬಾಡಿಗೆಗೆ ಇದೆ
15x40, ಡಬಲ್ ಬೆಡ್ ರೂಂ ಇರುವ ಮೊದಲನೆ ಮಹಡಿ ಕಟ್ಟಡ ಬಾಡಿಗೆಗೆ ಇದೆ. # 369/4 , 17ನೇ ಕ್ರಾಸ್, ಕೆಟಿಜೆ ನಗರ, ಬನ್ನಿಮಹಂಕಾಳಿ ರೋಡ್, ದಾವಣಗೆರೆ.
ಸಂಪರ್ಕಿಸಿ :
99164 87751, 96200 22824

ವಾಟರ್ ಪ್ರೂಫಿಂಗ್
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

ಓಂ ಶ್ರೀ ಗುರು ರಾಘವೇಂದ್ರ ಜೋತಿಷ್ಯಾಲಯ
ಪಂ. ರವಿಶಂಕರ್ ಗುರೂಜಿ
ಉಚಿತ ಭವಿಷ್ಯ, ಶಾಶ್ವತ ಪರಿಹಾರ, ರಾಯರ ಪೂಜೆಯಿಂದ ಸ್ತ್ರೀ-ಪುರುಷ ವಶೀಕರಣ, ಶತ್ರುನಾಶ, ಪ್ರೀತಿಯಲ್ಲಿ ನಂಬಿ ಮೋಸ, ಸತಿ-ಪತಿ ಕಿರಿಕಿರಿ, ಲಕ್ಷ್ಮೀವಶ, ಭೂಮಿ ವಶ, ಅತ್ತೆ ಸೊಸೆ ಕಲಹ 100% ಪರಿಹಾರ ಶತಸಿದ್ಧ.
96064 23948

ನವರ್ಣ ತಂತ್ರ ಶಕ್ತಿ
ಯಂತ್ರ, ಮಂತ್ರ, ತಂತ್ರ ವಿದ್ಯೆಗಳ ತರಬೇತಿ ಹಾಗೂ ಪರಿಹಾರ ಕೊಡಲಾಗುವುದು.
ವಿ.ಸೂ: ವೃದ್ಧರಿಗೆ & ಮಹಿಳೆಯರಿಗೆ ಎಂತಹ ಕಠಿಣ ಸಮಸ್ಯೆಯಿದ್ದರೂ ಉಚಿತ ಪರಿಹಾರ
97409 55345


# ಹರಿಹರ: ಮಳೆಗೆ ಹೆಚ್ಚು ಬೆಳೆ ಹಾನಿ



(1ನೇ ಪುಟದಿಂದ) ಜೊತೆಗೆ ನೂರಾರು ಎಕರೆ ವೀಳ್ಯೆದೆಲೆ ಮತ್ತು ಅಡಿಕೆ ತೋಟ, ಭತ್ತ, ಮೆಕ್ಕೆ ಜೋಳ ಮತ್ತು ಇತರೆ ಜಮೀನುಗಳಲ್ಲಿ ನೀರು ನುಗ್ಗಿ ಬೆಳೆ ಹಾನಿಯಾಗಿದೆ.

ತಾಲ್ಲೂಕಿನಲ್ಲಿ ಸುರಿದ ಮಳೆಗೆ ಶಾಂತಿಸಾಗರ, ಸೂಳೆಕೆರೆ, ಶ್ಯಾಗಲೆ ಹಳ್ಳ ಎಂದು ಕರೆಯಲ್ಪಡುವ ಬ್ಯಾಲದಹಳ್ಳಿ ಹಳ್ಳವು ಸಂಪೂರ್ಣವಾಗಿ ತುಂಬಿ ಹರಿಯುತ್ತಿರುವ ಪರಿಣಾಮ ಗ್ರಾಮದ ಸಮೀಪದ ಸೇತುವೆ ಮೇಲೆ ನೀರು ಹರಿದು, ರಸ್ತೆ ಸಂಪರ್ಕ ಕಡಿತವಾಗಿದೆ, ರೈತರ ಜಮೀನುಗಳಿಗೆ ನೀರು ನುಗ್ಗಿ ಕೃಷಿ ಚಟುವಟಿಕೆ ನಡೆಸಲು ಕಷ್ಟವಾಗಿದೆ. ತಾಲ್ಲೂಕಿನಾದ್ಯಂತ ಬೆಳ್ಳೂಡಿಯಲ್ಲಿ 55 ಎಕರೆ, ಬ್ಯಾಲಹಳ್ಳಿ 35 ಎಕರೆ, ರಾಮತೀರ್ಥ 10 ಎಕರೆ, ವೀಳ್ಯೆದೆಲೆ ಬಳ್ಳಿ ನಾಶವಾಗಿದೆ. ಬೆಳ್ಳೂಡಿಯ 35 ಎಕರೆ, ಬ್ಯಾಲದಹಳ್ಳಿಯ 15 ಎಕರೆ ಅಡಿಕೆ ತೋಟಕ್ಕೆ ಹಾನಿಯಾಗಿದೆ. ಅಲ್ಲದೆ ಬೆಳ್ಳೂಡಿಯ 42 ಎಕರೆ, ಬ್ಯಾಲದಹಳ್ಳಿಯ 35, ದೇವರಬೆಳಕೆರೆಯ 20, ರಾಮ ತೀರ್ಥದ 6, ಸಲಗನಹಳ್ಳಿಯ 40, ಕಡ್ಲೆ ಗೊಂದಿಯ 10 ಎಕರೆ ಪ್ರದೇಶದ ಭತ್ತದ ಬೆಳೆ ನಾಶವಾಗಿದೆ. ತಾಲೂಕಿನ ಒಟ್ಟು 338 ಎಕರೆ ಪ್ರದೇಶ ಜಲಸಮಾಧಿ ಆಗಿದೆ ಎಂಬ ವರದಿಯಾಗಿದೆ.

ಪ್ರವಾಹ ಪೀಡಿತ ಪ್ರದೇಶಗಳಿಗೆ ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ಕೃಷಿ ಅಧಿಕಾರಿ ಗೋವರ್ಧನ್, ತಾ.ಪಂ. ಇಓ ಗಂಗಾಧರನ್, ಪೊಲೀಸ್ ಇಲಾಖೆಯ ಅಧಿಕಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳು ಸೇರಿದಂತೆ ಹಲವು ಅಧಿಕಾರಿಗಳು, ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿರುತ್ತಾರೆ. ಬಹುತೇಕ ರೈತರ ಜಮೀನುಗಳು ಜಲಾವೃತವಾಗಿವೆ. ಬೆಳ್ಳೂಡಿ-ರಾಮತೀರ್ಥ ಮಾರ್ಗದಲ್ಲಿರುವ ಸೇತುವೆ ಸಂಪೂರ್ಣ ಕುಸಿತಗೊಂಡಿದೆ. ಕೃಷಿ ಚಟುವಟಿಕೆ ಹಾಗೂ ಕೂಲಿ ಕೆಲಸಗಳಿಗೆ ಹೋಗಲು ಗ್ರಾಮದ ಜನತೆ ಇದೇ ರಸ್ತೆಯನ್ನು ಅವಲಂಬಿಸಿದ್ದಾರೆ. ಈ ಸೇತುವೆ ಮುಳುಗಿರುವುದರಿಂದ ರೈತರು ತಮ್ಮ ಕೃಷಿ ಚಟುವಟಿಕೆ ನಡೆಸಲು ಸುಮಾರು 10 ಕಿ.ಮೀ. ಸುತ್ತುವರೆದು ಜಮೀನುಗಳಿಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಈ ಸ್ಥಳದಲ್ಲಿ ಎತ್ತರ ಮಟ್ಟದ ನೂತನ ಸೇತುವೆ ನಿರ್ಮಿಸುವ ಮೂಲಕ ರೈತರ ಕೃಷಿ ಚಟುವಟಿಕೆಗಳಿಗೆ ತೆರಳಲು ಶಾಶ್ವತ ಪರಿಹಾರ ನೀಡಬೇಕೆಂದು ಈ ಭಾಗದ ರೈತರ ಒತ್ತಾಯವಾಗಿದೆ. ಕಳೆದ ಬಾರಿ ಅಧಿಕಾರಿಗಳು ಜಲಾವೃತ ಪ್ರದೇಶದ ಸಮೀಕ್ಷೆ ಮಾಡಿ ಹೋಗಿದ್ದು ಇಲ್ಲಿಯವರೆಗೂ ಪರಿಹಾರ ಧನ ಸಿಕ್ಕಿರುವುದಿಲ್ಲ. ಕೇಳಿದರೆ ಸರ್ಕಾರಕ್ಕೆ ಕಳುಹಿಸಿದ್ದೇವೆ ಇನ್ನು ಬಂದಿಲ್ಲ ಎಂದು ಹಾರಿಕೆಯ ಉತ್ತರ ನೀಡುತ್ತಿದ್ದಾರೆ. ಈ ವರ್ಷ ಬೆಳೆದ ಬೆಳೆಯು ಸಹ ಸಂಪೂರ್ಣವಾಗಿ ನಾಶವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕಾಗಿದೆ ಎಂದು ಗ್ರಾಮದ ರೈತರು ತಿಳಿಸಿದರು.

ಈಗ ಇರುವ ಬೆಳ್ಳೂಡಿ ಮತ್ತು ರಾಮತೀರ್ಥ ಗ್ರಾಮದ ಮಧ್ಯದಲ್ಲಿ ಇರುವ ಸೇತುವೆಯು ಪ್ರತಿ ಬಾರಿ ಮುಳುಗುವುದಕ್ಕೆ ಸೇತುವೆಯನ್ನು ಕಟ್ಟುವಾಗ ಬಹಳ ಹತ್ತಿರದಲ್ಲಿ ಪಿಲ್ಲರ್ ಹಾಕಿ ಕಟ್ಟಿರುವುದರಿಂದ ಕಸ ಕಡ್ಡಿಗಳು ಕಟ್ಟಿಕೊಂಡು ನೀರು ಸರಾಗವಾಗಿ ಹರಿಯದೆ ಸೇತುವೆ ಕುಸಿತ ಕಂಡಿದೆ. ಇಲ್ಲಿನ ಸಮಸ್ಯೆ ಬಗ್ಗೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಬಳಿ ಮಾತನಾಡಿದ್ದು, ಅವರು ಶಾಶ್ವತ ಪರಿಹಾರ ನೀಡುವ ಉದ್ದೇಶದಿಂದ ಹೊಸದಾಗಿ ಎತ್ತರದ ಸೇತುವೆ ನಿರ್ಮಾಣಕ್ಕೆ ಚಿಂತನೆ ನಡೆಸಿದ್ದಾರೆ. ಶೀಘ್ರವಾಗಿ ಸೇತುವೆ ನಿರ್ಮಾಣದ ಕಾರ್ಯವನ್ನು ಮಾಡಲಾಗುತ್ತದೆ. ಸದ್ಯದಲ್ಲಿ ಸಾರ್ವಜನಿಕರಿಗೆ ಓಡಾಡುವವುದಕ್ಕೆ ತಾತ್ಕಾಲಿಕವಾಗಿ ಅನುಕೂಲ ಮಾಡಲಾಗುತ್ತದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದರು.

## ನಗರದಲ್ಲಿ ಇಂದು ಶಿಕ್ಷಕರ ದಿನಾಚರಣೆ

ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕ, ಉತ್ತರ ವಲಯದ ಆಶ್ರಯದಲ್ಲಿ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭವನ್ನು ಇಂದು ಬೆಳಿಗ್ಗೆ 10.30 ಕ್ಕೆ ಶ್ರೀ ಪಾತಾಳ ಲಿಂಗೇಶ್ವರ ದೇವಸ್ಥಾನದ ಹತ್ತಿರ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಜಿ. ಕೊಟ್ರೇಶ್ ಉದ್ಘಾಟಿಸುವರು. ಬಿ.ಎಸ್. ಕಲ್ಲಪ್ಪ ಅಧ್ಯಕ್ಷತೆ ವಹಿಸುವರು. ಉಪನ್ಯಾಸಕಿ ಶ್ರೀಮತಿ ಎ.ಹೆಚ್ ಸುಗ್ಗಾದೇವಿ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಬಿ.ಕೆ. ನಾಗರಾಜ್, ಸೋಮಶೇಖರ್, ಎ.ಕೆ. ಮಂಜಪ್ಪ ಭಾಗವಹಿಸುವರು.

## ರಾಣೇಬೆನ್ನೂರು ಇಂದು ವಿದ್ಯುತ್ ವ್ಯತ್ಯಯ

ಸಿದ್ಧಾರೂಢ ಮಠ, ಕಂಠಿ ಬೀರೇಶ್ವರ ನಗರ, ಗೌಡ ಶಿವಣ್ಣನವರ ಲೇ-ಔಟ್, ಸಿದ್ಧಾರೂಢ ಮಠ, ಕಮಲಾ ನಗರ ವಾಟರ್ ಟ್ಯಾಂಕ್, ಚಿದಂಬರ ನಗರ, ನೇಕಾರ ಕಾಲೋನಿ, ಇಂಜಿನಿಯರಿಂಗ್ ಕಾಲೇಜು, ಕೈಗಾರಿಕಾ ವಸಾಹತು, ಮಾಗೋಡ ರಸ್ತೆ, ದಾನೇಶ್ವರಿ ನಗರ, ಎಸ್.ಆರ್.ಕೆ. ಲೇ-ಔಟ್, ಶಿವಲಿಂಗಪ್ಪ ಲೇ-ಔಟ್, ಕೆ.ಹೆಚ್.ಬಿ ಕಾಲೋನಿಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಇರುವುದಿಲ್ಲ.


ಸಾವಯವ ಗೊಬ್ಬರ, ಎರೆಹುಳು ಗೊಬ್ಬರ ದೊರೆಯುತ್ತದೆ
License No - JDA/F&PP/KAR/FE19-200282/2019-20
93411 71212, 81054 98069

ನರ್ಸಿಂಗ್ ಸೇವೆಗಳು
HOME NURSING
ಮನೆಯಲ್ಲಿರುವ ರೋಗಿಗಳನ್ನು ಹಾಗೂ ವೃದ್ಧರ ಆರೈಕೆಗಾಗಿ BP, Sugar, Dressing, Nebulizaion.
ಸಂಪರ್ಕಿಸಿ :
90711 06106

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಹೆಣ್ಣುಮಕ್ಕಳು ಬೇಕಾಗಿದ್ದಾರೆ.
ವಸತಿ, ಊಟ ನೀಡಲಾಗುವುದು
ಸಂಪರ್ಕಿಸಿ:
94488 86026
98865 67791

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ವಸತಿ, ಊಟ ನೀಡಲಾಗುವುದು. ಸಂಪರ್ಕಿಸಿ :
94488-86026
98865-67791

ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ.
ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

Income Tax Return Filing
PAN Card, Passport, GST, MSME Company registration, Website
for all Business Needs
Contact :
91642 56425

ಸೈಟ್ ಮಾರಾಟಕ್ಕಿದೆ
ಹರಿಹರ KEB ಗ್ರಿಡ್ ಹತ್ತಿರ 40x60
Rs 300 ಅಡಿಗೆ
ಮೊ: 74112 50447

ಜಮೀನು ಮಾರಾಟಕ್ಕಿದೆ
@ Rs 19 Lacks/ಎಕರೆ
ಹರಿಹರ ಹತ್ತಿರ.
ಮೊ: 74112 50447

ರೂಂ ಬಾಡಿಗೆಗೆ ಇದೆ
ಎಲ್ಲಾ ಸೌಕರ್ಯ ಹೊಂದಿರುವ 7 ರೂಂಗಳು ವಕ್ಕಲಿಗರ ಪೇಟೆ, ಆನಂದಸಾಗರ ಹೋಟೆಲ್ ಮೇಲೆ, ಮೊದಲನೇ ಮಹಡಿಯಲ್ಲಿ ವಾಸಕ್ಕೆ/ಆಫೀಸ್/ಕಛೇರಿಗಳಿಗೂ/ಪಿ.ಜಿ.ಗೂ ಅನುಕೂಲವಿರುವ ರೂಂ ಬಾಡಿಗೆಗೆ ದೊರೆಯುತ್ತವೆ. ಸಂಪರ್ಕಿಸಿ :
94834 44683, 70192 01113

ಮನೆ ಬಾಡಿಗೆಗೆ/ಲೀಜ್‌ಗೆ
ಭಗೀರಥ ಸರ್ಕಲ್ ಹತ್ತಿರ 10x30 ಅಳತೆಯ ಚಿಕ್ಕ ಮನೆಗಳು ಬಾಡಿಗೆಗೆ/ಲೀಜ್‌ಗೆ ದೊರೆಯುತ್ತವೆ.
ಸಂಪರ್ಕಿಸಿ:
94484 39639
63665 96479

ತಕ್ಷಣ ಬೇಕಾಗಿದ್ದಾರೆ
BPO ಹಾಗೂ ಡಾಟಾ ಎಂಟ್ರಿ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ ಮತ್ತು ಬರವಣಿಗೆ ಮೂಲಕ ಮನೆಯಲ್ಲೇ ಕುಳಿತು ಹಣ ಗಳಿಸುವ ಸುಲಭ ಅವಕಾಶ (Offline)
ಸ್ಥಳ: ಹೊಂಡದ ಸರ್ಕಲ್ (10 To 6)
89043 81491, 63666 97050

ರೂಂ ಬಾಡಿಗೆಗೆ ಇದೆ
ದಾವಣಗೆರೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ 3ನೇ ಮೇನ್ ಡೋ.ನಂ. 2650/22, 2ನೇ ಫ್ಲೋರ್, 2 ಚದರ ಅಡಿಯ ಅಟ್ಯಾಚ್ ಬಾತ್‌ರೂಂ ಸೋಲಾರ ಮತ್ತು ಎ.ಸಿ. ಇರುತ್ತದೆ. 24x7 ನೀರಿನ ಸೌಲಭ್ಯವಿರುತ್ತದೆ.
99455 68859

ನೀರಿನ ಲೀಕೇಜ್
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

SITE FOR SALE
KHB Site, Facing: West, Measurement: 40x60
Contact No :
98807 75075, 9964 709966
Mediators are not entertained


ಮಾಸ್ಕ್ ಧರಿಸಿ ಕೊರೊನಾ ತೊಲಗಿಸಿ

## ಭರಮಸಾಗರದ ಜವಳಿ ಕೊಟ್ರೇಶ್ ನಿಧನ



ಚಿತ್ರದುರ್ಗ ತಾಲ್ಲೂಕು ಭರಮಸಾಗರ ಗ್ರಾಮದ ವಾಸಿ, ಜವಳಿ ಕೊಟ್ರೇಶ್ (78) ಅವರು ದಿನಾಂಕ 11.09.2020ರ ಶುಕ್ರವಾರ ರಾತ್ರಿ 9.50 ಕ್ಕೆ ನಿಧನರಾದರು. ಪತ್ನಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.09.2020ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಭರಮಸಾಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಶ್ರೀಮತಿ ದೊಗ್ಗಳ್ಳಿ ನೀಲಮ್ಮ ನಿಧನ




ಐಗೂರು ಬೂದಿಹಾಳ್ ಜಯ್ಯಪ್ಪ, ನಿವೃತ್ತ ಸಹಾಯಕ ನಿರ್ದೇಶಕರು ಇವರ ಧರ್ಮಪತ್ನಿ ದೊಗ್ಗಳ್ಳಿ ನೀಲಮ್ಮ (81) (ದಿ. ದೊಗ್ಗಳ್ಳಿ ಮಲ್ಲಿಕಾರ್ಜುನಪ್ಪನವರ ಸಹೋದರಿ) ಅವರು ದಿನಾಂಕ 11.9.2020ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಿಧನರಾದರು. ಪತಿ ಮತ್ತು ಇಬ್ಬರು ಪುತ್ರರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಆಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.9.2020ರ ಶುಕ್ರವಾರ ಸಂಜೆ 4 ಗಂಟೆಗೆ ನೆರವೇರಿಸಲಾಯಿತು.

## ಲಕ್ಕಶೆಟ್ಟಿಹಳ್ಳಿ ಗ್ರಾಮದ ನಿಂಗನಗೌಡ ನಿಧನ



ಹರಿಹರ ತಾಲ್ಲೂಕು ಲಕ್ಕಶೆಟ್ಟಿಹಳ್ಳಿ ಗ್ರಾಮದ ದಿ|| ಸಣ್ಣಗೌಡ್ರ ಹನುಮಂತಪ್ಪನವರ ಪುತ್ರರಾದ ಎಲ್.ಜಿ. ನಿಂಗನಗೌಡ (54) ಅವರು, ದಿನಾಂಕ 11.9.2020ರ ಶುಕ್ರವಾರ ಬೆಳಗಿನ ಜಾವ 5 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.9.2020ರ ಶುಕ್ರವಾರ ಸಾಯಂಕಾಲ ಲಕ್ಕಶೆಟ್ಟಿಹಳ್ಳಿಯಲ್ಲಿ ನೆರವೇರಿಸಲಾಯಿತು.

## 20ನೇ ವರ್ಷದ ಪುಣ್ಯಸ್ಮರಣೆ



ದಿ. ಶ್ರೀ ಅಂಗಡಿ ಬಸವಣ್ಯೆಪ್ಪ
ಹೊಸಕುಂದುವಾಡ, ದಾವಣಗೆರೆ ತಾಲ್ಲೂಕು
ನೀವು ನಮ್ಮನ್ನಗಲಿ (12.09.2020) ಇಂದಿಗೆ 20 ವರ್ಷಗಳಾದವು. ನೀವು ತೋರಿದ ದಾರಿಯೇ ನಮಗೆ ದಾರಿ ದೀಪವಾಗಿದೆ. ನೀವು ಹಾಕಿ ಕೊಟ್ಟ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಆ ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ. ಸದಾ ನಿಮ್ಮ ನೆನಪಿನಲ್ಲಿರುವ,
ಪತ್ನಿ : ಶ್ರೀಮತಿ ಗಂಗಮ್ಮ ಮತ್ತು ಮಕ್ಕಳು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 10.09.2020ರಂದು ನಿಧನರಾದ
ಬಿ.ಎಂ. ಹಾಲಸಿದ್ದಪ್ಪ (ಯರಗುಂಟೆ)
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ✦ ಶ್ರೀಮತಿ ಚಂದ್ರಮ್ಮ ಮಹಾರುದ್ರಪ್ಪ ಟಿ.ಜಿ. ನಿವೃತ್ತ ಎಪಿಎಂಸಿ ಸೂಪರ್‌ವೈಸರ್
- ✦ ವೀರೇಶ್ ಟಿ.ಎಂ. (ರಿಯಲ್ ಎಸ್ಟೇಟ್)
- ✦ ಬಸವರಾಜ್ ಟಿ.ಎಂ. ✦ ಭಾಗ್ಯ ವಿಜಯ್
- ✦ ಟಿ.ಬಸವರಾಜಪ್ಪ ಅಂಡ್ ಬ್ರದರ್ಸ್, ಬಿ.ದುರ್ಗ.

## ಬುಳ್ಳಾಪುರದ ಇ.ಜಿ. ಚನ್ನಬಸಪ್ಪ ನಿಧನ



ದಾವಣಗೆರೆ ತಾಲ್ಲೂಕು ಬುಳ್ಳಾಪುರದ ವಾಸಿ ಇ.ಜಿ. ಚನ್ನಬಸಪ್ಪ (73) ಇವರು ದಿನಾಂಕ 11.09.2020 ರ ಶುಕ್ರವಾರ ರಾತ್ರಿ 10 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 12.09.2020ರ ಶನಿವಾರ ನೆರವೇರಿಸಲಾಗುವುದು.

## ಆವರಗೆರೆ ಎಸ್.ಮಂಜುನಾಥ್ ನಿಧನ




ದಾವಣಗೆರೆ ಸಿಟಿ ಆವರಗೆರೆ ಗ್ರಾಮದ ವಾಸಿ ಬಾರಿಕರ ಶಿವಪ್ಪನವರ ಪುತ್ರ ಎಸ್. ಮಂಜುನಾಥ್ (43) ಅವರು ದಿನಾಂಕ 11.09.2020 ರ ಶುಕ್ರವಾರ ರಾತ್ರಿ 8 ಗಂಟೆಗೆ ನಿಧನರಾದರು. ಪತ್ನಿ, ಮೂವರು ಪುತ್ರರು ಹಾಗೂ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.9.2020ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಆವರಗೆರೆ ರುದ್ರಭೂಮಿಯಲ್ಲಿ ನೆರವೇರಲಿದೆ.

## ರಾಮಗೊಂಡನಹಳ್ಳಿ ಬಸಮ್ಮ ನಿಧನ



ದಾವಣಗೆರೆ ತಾಲ್ಲೂಕು ರಾಮಗೊಂಡನಹಳ್ಳಿ ಗ್ರಾಮದ ವಾಸಿ, ಬಸಮ್ಮ ಅವರು ದಿನಾಂಕ 11.09.2020ರ ಶುಕ್ರವಾರ ಸಂಜೆ 4 ಗಂಟೆಗೆ ನಿಧನರಾದರು. ಮಕ್ಕಳು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.09.2020ರ ಶನಿವಾರ ಬೆಳಿಗ್ಗೆ ಮೃತರ ಸ್ವಗ್ರಾಮ ರಾಮಗೊಂಡನಹಳ್ಳಿಯಲ್ಲಿ ನೆರವೇರಲಿದೆ.

## ಕೈಲಾಸ ಶಿವಗಣಾರಾಧನೆ ಆಹ್ವಾನ



ಜನನ : 10-08-1987 ನಿಧನ : 09-09-2020

|| ಶ್ರೀ ಕೊಡೇಕಲ್ ಬಸವೇಶ್ವರ ಪ್ರಸನ್ನ ||

ದಾವಣಗೆರೆ ವಿದ್ಯಾನಗರ ವಾಸಿ, ಶ್ರೀಮತಿ ಗಿರಿಜಮ್ಮ ಮತ್ತು ಶ್ರೀ ಟಿ. ಶಂಕರಪ್ಪ (ಮೋತಿ ಸೈಕಲ್ ಮಾರ್ಟ್ ಮಾಲೀಕರು) ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 09.09.2020ನೇ ಬುಧವಾರ ಸಂಜೆ 5.45 ಕ್ಕೆ ನಮ್ಮ ಸುಪುತ್ರನಾದ

**ಶ್ರೀ ಟಿ.ಎಸ್. ಬಕ್ಕೇಶ್**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 13.09.2020ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ದಾವಣಗೆರೆ ವಿದ್ಯಾನಗರ 10ನೇ ಕ್ರಾಸ್, ಶ್ರೀ ಆಂಜನೇಯ ದೇವಸ್ಥಾನದ ಹಿಂಭಾಗದಲ್ಲಿರುವ (#1645/15) ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು,
ಶ್ರೀಮತಿ ಗಿರಿಜಮ್ಮ ಮತ್ತು ಶ್ರೀ ಟಿ. ಶಂಕರಪ್ಪ
ಮೃತರ ಪತ್ನಿ ಶ್ರೀಮತಿ ಪ್ರತಿಭಾ ಮತ್ತು ಮಕ್ಕಳಾದ ಮದನ್ ಗಗನ್
ತಾಳಿಕೋಟೆ ವಂಶಸ್ಥರು ಹಾಗೂ ಬಂಧು-ಮಿತ್ರರು.
ಮೊಬೈಲ್ : 9844277504, 9902855060

||ಶ್ರೀ ಪಾರ್ಶ್ವನಾಥಾಯ ನಮಃ|| ||ಶ್ರೀ ಪದ್ಮಾವತ್ಯೇ ನಮಃ||

## ಧರ್ಮವಾರ್ತೆ



ದಾವಣಗೆರೆ ಎಸ್.ಎಸ್.ಲೇ ಔಟ್ ನಿವಾಸಿಗಳಾದ
**ಶ್ರೀಮತಿ ಮತ್ತು ಶ್ರೀ ಚಂದ್ರಕಾಂತ್ ಹಾಗೂ ಸಹೋದರಿಯರು**
ಮಾಡುವ ವಿಜ್ಞಾಪನೆಗಳು.
ದಿನಾಂಕ : 01.09.2020ನೇ ಮಂಗಳವಾರದಂದು ನಮ್ಮ ಮಾತೃಶ್ರೀಯವರಾದ
**ಶ್ರೀಮತಿ ರೇವತಿ ಕುಮಾರಿಯವರು**
ಸ್ವರ್ಗಸ್ಥರಾದ ಪ್ರಯುಕ್ತ ಇವರ ದೇಹ ದಹನಾದಿ ಕ್ರಿಯೆಗಳ ಪ್ರಾಯಶ್ಚಿತ್ತಾರ್ಥವಾಗಿ ಹಾಗೂ ಆತ್ಮಶಾಂತಿಗಾಗಿ ದಿನಾಂಕ : 13.09.2020ನೇ ಆದಿತ್ಯವಾರ ಬೆಳಿಗ್ಗೆ 10.00 ಘಂಟೆಗೆ ನರಸರಾಜ ರಸ್ತೆಯಲ್ಲಿರುವ ಶ್ರೀ ಪಾರ್ಶ್ವನಾಥ ಜಿನ ಮಂದಿರದಲ್ಲಿ 108 ಕಲಶಾಭಿಷೇಕ ಪೂಜೆ ನಂತರ ಮಹಾವೀರ ರಸ್ತೆಯಲ್ಲಿರುವ ಬಿ.ಟಿ.ಜೈನ್ ಹಾಸ್ಟೆಲ್‌ನಲ್ಲಿ "ಸಂಘ ಸಂತರ್ಪಣೆ" ಏರ್ಪಡಿಸಿರುವುದರಿಂದ ತಾವೆಲ್ಲರೂ ಆಗಮಿಸಿ, ಪೂಜಾ ಕಾರ್ಯದಲ್ಲಿ ಭಾಗವಹಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಅಪೇಕ್ಷಿಸುತ್ತೇವೆ.

ದುಃಖತಪ್ತರು :
ಶ್ರೀಮತಿ ರಾಜಮತಿ ಅಮ್ಮ ಮತ್ತು ಮಕ್ಕಳು ಹಾಗೂ ಬಂಧುಗಳು
ಶ್ರೀಮತಿ ಮತ್ತು ಶ್ರೀ ಚಂದ್ರಕಾಂತ್ ಹಾಗೂ ಸಹೋದರಿಯರು,
ಅಳಿಯಂದಿರು, ಮೊಮ್ಮಕ್ಕಳು, ಮರಿಮಗಳು. ಮೊ. 63622-69175

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ಜನನ 1943



ಮರಣ 2020

**ಶ್ರೀಮತಿ ಪಾರ್ವತಮ್ಮ**
ದಿ|| ಹನುಮಯ್ಯ ಇವರ ಧರ್ಮಪತ್ನಿ, ಹೂವಿನಹಡಗಲಿ
ಇವರು ದಿನಾಂಕ 04.09.2020ನೇ ಶುಕ್ರವಾರ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಆತ್ಮಶಾಂತಿಗಾಗಿ ದಿನಾಂಕ 12.09.2020ನೇ ಶನಿವಾರ 11.30 ಕ್ಕೆ ಹೂವಿನಹಡಗಲಿ ಪಟ್ಟಣದ 18ನೇ ವಾರ್ಡಿನ ರಾಜೀವ್ ನಗರದ ತೋಟದ ಮನೆಯಲ್ಲಿ **ಶಿವಗಣಾರಾಧನೆ**ಯನ್ನು ನೆರವೇರಿಸಲಾಗುವುದು. ಕಾರಣ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
ಶ್ರೀಮತಿ ವೀರಬಸಮ್ಮ ಆರ್.ಫಕ್ಕೀರಪ್ಪ ಮಾಜಿ ಅಧ್ಯಕ್ಷರು ಆರ್.ಎಸ್. ಎಸ್.ಎನ್, ಹಾಲಿ ನಿರ್ದೇಶಕರು.
ದಿ|| ಪರಮೇಶ್ವರಪ್ಪ ಪತ್ನಿ ಆರ್.ನಿರ್ಮಲ, ಪುರಸಭಾ ಸದಸ್ಯರು, 18ನೇ ವಾರ್ಡ್.
ಶ್ರೀಮತಿ ರೇಣುಕಾ ಲಕ್ಷ್ಮಣ ಹಾಗೂ ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಬಾಂಧವರು - ಆಪ್ತ ಮಿತ್ರರು

# ಸೋಂಕಿನ ಪ್ರವಾಹ, ಸಿಬ್ಬಂದಿಗೆ ಬರ



**(1ನೇ ಪುಟದಿಂದ)** ನೇಮಿಸಿಕೊಳ್ಳಿ. ಅಗತ್ಯವಾದರೆ, ಖಾಸಗಿ ವೈದ್ಯರನ್ನು ನೇಮಿಸಿಕೊಳ್ಳಿ ಎಂದು ಜಿಲ್ಲಾ ಪಂಚಾಯ್ತಿ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷ ವೀರಶೇಖರಪ್ಪ ತಿಳಿಸಿದರು.

ಚಿಗಟೇರಿ ಆಸ್ಪತ್ರೆಯಲ್ಲಿ ಹತ್ತು ವೆಂಟಿಲೇಟರ್‌ಗಳು ಈಗ ಕೆಲಸ ಮಾಡುತ್ತಿವೆ. 21 ವೆಂಟಿ ಲೇಟರ್‌ಗಳು ಮೀಸಲಾಗಿವೆ. ಇದಕ್ಕೆ ವೈದ್ಯಕೀಯ ಸಿಬ್ಬಂದಿಯ ಅಗತ್ಯವಿದೆ ಎಂದ ಜಿಲ್ಲಾ ಸರ್ಜನ್ ಜಯಪ್ರಕಾಶ್, ಲಿಕ್ವಿಡ್ ಆಕ್ಸಿಜನ್ ಘಟಕ ಆಸ್ಪತ್ರೆಯಲ್ಲಿ, ಹತ್ತು ದಿನಗಳಲ್ಲಿ ನಿರ್ಮಾಣವಾ ಗಲಿದೆ. ಸದ್ಯಕ್ಕೆ ಹರಿಹರದಿಂದ ಆಕ್ಸಿಜನ್ ಸಿಲಿಂಡರ್ ತರಿಸಲಾಗುತ್ತಿದೆ ಎಂದು ತಿಳಿಸಿದರು.

ಡಿ.ಹೆಚ್.ಓ. ರಾಘವೇಂದ್ರ ಸ್ವಾಮಿ ಮಾತನಾಡಿ, ಮೂರ್ನಾಲ್ಕು ದಿನಗಳಲ್ಲಿ ವೈದ್ಯರು ಹಾಗೂ ಅನಸ್ತೇಷಿಯಾ ಪರಿಣಿತರು ಚಿಕಿತ್ಸೆಗೆ ಲಭ್ಯವಾಗಲಿದ್ದಾರೆ. ಆಗ ಸ್ವಲ್ಪ ಸಮಸ್ಯೆ ಕಡಿಮೆಯಾಗಲಿದೆ. ಆಸ್ಪತ್ರೆಗೆ ಹಲವು ವಿಭಾಗಗಳ ವೈದ್ಯರೂ ಸೇರಿದಂತೆ 260 ಸಿಬ್ಬಂದಿಯ ಅಗತ್ಯವಿದೆ. ಈ ಬಗ್ಗೆ ಪ್ರಸ್ತಾವನೆ ಕಳಿಸಿದ್ದೇವೆ ಎಂದರು.

ಶೀತ ಹಾಗೂ ಕೆಮ್ಮಿಗೆ ಚಿಕಿತ್ಸೆ ನೀಡಲೂ ಕೊರೊನಾ ಟೆಸ್ಟ್ ಮಾಡಬೇಕು ಎಂದು ಸರ್ಕಾರಿ ಆಸ್ಪತ್ರೆಗಳಲ್ಲಿ ಹೇಳಲಾಗುತ್ತಿದೆ. ಟೆಸ್ಟ್ ಮಾಡಿಸಿ, ಆದರೆ, ಅದಕ್ಕೂ ಮುಂಚೆ ಪ್ರಾಥಮಿಕ ಚಿಕಿತ್ಸೆ ಕೊಡಿ ಎಂದ ಅಧ್ಯಕ್ಷೆ ದೀಪಾ, ತಾಲ್ಲೂಕು ಆಸ್ಪತ್ರೆಗಳಲ್ಲಿ ಜನಔಷಧಿ ಇದ್ದರೂ ಹೊರಗೆ ಚೀಟಿ ಬರೆದು ಕೊಡಲಾಗುತ್ತಿದೆ. ಜನೌಷಧಿ ಕೇಂದ್ರಗಳ ಔಷಧಗಳ ಬೆಲೆಗಳಲ್ಲೂ ವ್ಯತ್ಯಾಸ ಇದೆ ಎಂದರು.

ಜನೌಷಧಿ ಕೇಂದ್ರಗಳಲ್ಲಿ ಬೆಲೆಗಳಲ್ಲಿ ವ್ಯತ್ಯಾಸ ಇದ್ದರೆ ಆ ಬಗ್ಗೆ ಪರಿಶೀಲನೆ ನಡೆಸಬೇಕು. ಜನೌಷಧಿ ಕೇಂದ್ರದ ಲೋಪಗಳ ಬಗ್ಗೆ ಎಂ.ಎಸ್.ಐ.ಎಲ್.ಗೆ ದೂರು ಸಲ್ಲಿಸಬೇಕು ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪದ್ಮಾ ಬಸವಂತಪ್ಪ ಸೂಚಿಸಿದರು.

## ಬಿಪಿಎಲ್ ಕಾರ್ಡು ರದ್ದು

**(1ನೇ ಪುಟದಿಂದ) ಕಾರ್ಡ್ ವಾಪಸ್ ಕೊಟ್ಟಿದ್ದಾರೆ. ಇವುಗಳನ್ನು ರದ್ದು ಮಾಡುವ ಜೊತೆಗೆ ಕೆಲವರಿಂದ ದಂಡ ವಸೂಲಿ ಮಾಡಲಾಗಿದೆ ಎಂದು ಆಹಾರ ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳು ಸಭೆಗೆ ತಿಳಿಸಿದರು.**

**ಯಾಂತ್ರಿಕ ನಾಟಿ :** ಭತ್ತ ಬೆಳೆಯುವ ರೈತರ ಖರ್ಚು ಕಡಿಮೆ ಮಾಡಲು ಯಾಂತ್ರಿಕ ನಾಟಿಗೆ ಉತ್ತೇಜನ ನೀಡಬೇಕು. ರೈತರಿಗೆ ಬಿತ್ತನೆಯ ಕೂಲಿ ಹೊರೆಯಾಗುತ್ತಿದೆ ಎಂದು ವೀರಶೇಖರಪ್ಪ ತಿಳಿಸಿದರು.

ಈ ವರ್ಷ 1,500 ಹೆಕ್ಟೇರ್ ಪ್ರದೇಶದಲ್ಲಿ ಯಾಂತ್ರಿಕ ಬಿತ್ತನೆ ಮಾಡಲಾಗಿದೆ. ಇದರ ಇಳುವರಿ ಸಾಮಾನ್ಯವಾಗಿರಲಿದೆ ಎಂದು ರೈತರಿಗೆ ಮನವರಿಕೆ ಮಾಡಿಕೊಡುವ ಮೂಲಕ ಯಾಂತ್ರಿಕ ಬಿತ್ತನೆಗೆ ಉತ್ತೇಜನ ನೀಡಲಾಗುವುದು ಎಂದು ಕೃಷಿ ಇಲಾಖೆಯ ಉಪ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಹೇಳಿದರು.

**ಬಾರದ ಅಧಿಕಾರಿಗಳಿಗೆ ತರಾಟೆ :** ಕೊರೊನಾ ಸೋಂಕಿಗೆ ಸಿಲುಕಿದ ಕಾರಣಕ್ಕಾಗಿ ಕೆಲ ಇಲಾಖೆಗಳ ಮುಖ್ಯಸ್ಥರು ಸಭೆಗೆ ಬಂದಿರಲಿಲ್ಲ. ಇನ್ನು ಕೆಲವರು ಅನ್ಯ ಸಭೆ ಸೇರಿದಂತೆ ಹಲವು ಕಾರಣಗಳಿಗೆ ಗೈರಾಗಿದ್ದರು. ಆದರೆ, ಈ ಬಗ್ಗೆ ಮುಂಚೆಯೇ ಸೂಚನೆ ಇರುವುದನ್ನು ಗಂಭೀರವಾಗಿ ಪರಿಗಣಿಸಿದ ಪದ್ಮಾ ಬಸವಂತಪ್ಪ, ಮುಂದಿನ ಸಭೆಯಲ್ಲಿ ಇದೇ ವರ್ತನೆ ತೋರಿದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಸಭೆಯಲ್ಲಿ ಜಿ.ಪಂ. ಉಪಾಧ್ಯಕ್ಷೆ ಸಾಕಮ್ಮ, ಜಿ.ಪಂ. ಕೈಗಾರಿಕಾ ಸ್ಥಾಯಿ ಸಮಿತಿ ಅಧ್ಯಕ್ಷ ಫಕ್ಕೀರಪ್ಪ, ಜಿ.ಪಂ. ಉಪ ಕಾರ್ಯದರ್ಶಿ ಆನಂದ್ ಮತ್ತಿತರರು ಉಪಸ್ಥಿತರಿದ್ದರು.

# ರೈತ ಹೋರಾಟಗಾರ ವಾಸನದ ಓಂಕಾರಪ್ಪ ನಿಧನ

ಮಲೇಬೆನ್ನೂರು, ಸೆ.11- ರಾಜ್ಯ ರೈತ ಸಂಘದ ಉಪಾಧ್ಯಕ್ಷ ವಾಸನ ಗ್ರಾಮದ ಓಂಕಾರಪ್ಪ (62) ಅವರು ಶುಕ್ರವಾರ ಬೆಳಗಿನಜಾವ 3.30 ಕ್ಕೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ನಿಧನರಾದರು.

ಕೊರೊನಾ ಸೋಂಕಿನಿಂದ ಬಳಲುತ್ತಿದ್ದ ಅವರು,



ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆಂದು ಹೇಳ ಲಾಗಿದೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಶುಕ್ರವಾರ ಮಧ್ಯಾಹ್ನ ವಾಸನ ಸಮೀಪ ತುಂಗಭದ್ರಾ ನದಿ ದಡದಲ್ಲಿ ನೆರವೇರಿತು.

**ನಿರಂತರ ಹೋರಾಟ :** ಕಳೆದ ಸುಮಾರು 25 ವರ್ಷಗಳಿಂದ ರೈತ ಸಂಘದ ಮೂಲಕ ರೈತರ ಪರ ಹೋರಾಟ ಮಾಡುತ್ತಾ ಬಂದಿದ್ದ ಓಂಕಾರಪ್ಪ ಅವರು, ರೈತ ಸಂಘದ ಹರಿಹರ ತಾಲ್ಲೂಕು ಅಧ್ಯಕ್ಷರಾಗಿ, ದಾವಣಗೆರೆ ಜಿಲ್ಲಾಧ್ಯಕ್ಷರಾಗಿ, ಇದೀಗ ರಾಜ್ಯ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ಪುನರಾರಂಭ ಕ್ಕಾಗಿ ಹೋರಾಟದಲ್ಲಿ ಭಾಗಿಯಾಗಿದ್ದ ಓಂಕಾರಪ್ಪ ಅವರು, ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರ ಪರವಾಗಿ ಪ್ರತಿ ಬೇಸಿಗೆ ಬೆಳೆಯಲ್ಲೂ ಮಲೇಬೆನ್ನೂರಿನಲ್ಲಿ ರಸ್ತೆ ತಡೆ, ಉಪವಾಸ ಸತ್ಯಾಗ್ರಹ ಮಾಡುತ್ತಾ ಬಂದಿದ್ದರು.

ಬೆಸ್ಕಾಂನಿಂದ ರೈತರಿಗೆ ಅನ್ಯಾಯವಾದಾಗಲೂ ಹೋರಾಟ ಮಾಡಿದ್ದ ಅವರು ಎಕ್ಕೇಗೊಂದಿ, ಕೆ.ಎನ್. ಹಳ್ಳಿ ಗ್ರಾಮಗಳ ವಸತಿ ರಹಿತರ ಪರವಾಗಿಯೂ ಪ್ರತಿಭಟನೆ ಮಾಡಿದ್ದರು. ರೈತ ಸಂಘದ ಕೆ.ಟಿ. ಗಂಗಾಧರ್, ಕಬ್ಬು ಬೆಳೆಗಾರರ ಸಂಘದ ತೇಜಸ್ವಿ ಪಟೇಲ್ ಅವರ ಜೊತೆಯಲ್ಲೇ ಗುರುತಿಸಿಕೊಂಡಿದ್ದ ಓಂಕಾರಪ್ಪ ಅವರು ಆಗಸ್ಟ್ ತಿಂಗಳಲ್ಲಿ ಭದ್ರಾ ಜಲಾಶಯಕ್ಕೆ ಬಾಗಿನ ಅರ್ಪಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ದೊಡ್ಡ ನಷ್ಟ :** ವಾಸನದ ಓಂಕಾರಪ್ಪ ಅವರು ಸದಾ ರೈತರ, ನೊಂದವರ ಪರ ಹೋರಾಟ ರೂಪಿಸುತ್ತಿದ್ದರು. ಇವರ ಅಕಾಲಿಕ ನಿಧನದಿಂದ ದಾವಣಗೆರೆ ಜಿಲ್ಲೆಯ ರೈತರಿಗೆ ದೊಡ್ಡ ನಷ್ಟವಾಗಿದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ತೇಜಸ್ವಿ ಪಟೇಲ್ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಓಂಕಾರಪ್ಪನವರ ಅಗಲಿಕೆ ನಮ್ಮ ಹೋರಾಟದ ಬಲವನ್ನು ಕುಗ್ಗಿಸಿದೆ ಎಂದು ರೈತ ಸಂಘದ ಕೆ.ಟಿ. ಗಂಗಾಧರ್, ಕೆ.ಎನ್. ಹಳ್ಳಿಯ ಪ್ರಭುಗೌಡ, ಸಿರಿಗೆರೆ ಪಾಲಾಕ್ಷಪ್ಪ, ಭಾನುವಳ್ಳಿ ಕೊಟ್ರೇಶ್, ನಂದಿತಾವರೆಯ ಶಂಭುಲಿಂಗಪ್ಪ, ಮಂಜುಳಮ್ಮ ಮುರುಗೇಂದ್ರಯ್ಯ, ಜಿಗಳಿಯ ಬೆಣ್ಣೇರ ನಂದ್ಯೆಪ್ಪ ಅವರು ಕಂಬನಿ ಮಿಡಿದಿದ್ದಾರೆ.

## ಸಂಸದರ ಇಂದಿನ ಕಾರ್ಯಕ್ರಮ


ದಾವಣಗೆರೆ ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರರ ಅವರು ಇಂದು ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 1.30 ರವರೆಗೆ ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳ ವಿವಿಧ ಕಾಮಗಾರಿಗಳ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

# ದಾವಿವಿಗೆ ತುರುವನೂರು ಕಾಲೇಜು ಹಸ್ತಾಂತರ

ದಾವಣಗೆರೆ, ಸೆ.11- ಚಿತ್ರದುರ್ಗ ಜಿಲ್ಲೆಯ ತುರುವನೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಶುಕ್ರವಾರ ಅಧಿಕೃತವಾಗಿ ದಾವಣಗೆರೆ ವಿಶ್ವವಿದ್ಯಾನಿಲಯದ ಅಧೀನ ಕಾಲೇಜಾಗಿ ಒಪ್ಪಿಸಲಾಯಿತು.

ಕಾಲೇಜು ಆವರಣದಲ್ಲಿ ಇಂದು ನಡೆದ ಸರಳ ಸಮಾರಂಭದಲ್ಲಿ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ವೀರಭದ್ರಯ್ಯ ಅವರ ಸಮ್ಮುಖದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಬಸವರಾಜ ಬಣಕಾರ ಅವರಿಗೆ ಕಾಲೇಜಿನ ಪ್ರಾಂಶುಪಾಲ ಪ್ರೊ. ಸುರೇಶ್ ದಾಖಲಾತಿಗಳನ್ನು ಹಸ್ತಾಂತರಿಸಿದರು.

ನಂತರ ಮಾತನಾಡಿದ ಕುಲಸಚಿವ ಪ್ರೊ. ಬಣಕಾರ ಮಾತನಾಡಿ, ಇದೊಂದು ಅಪೂರ್ವ ಕ್ಷಣ. ಸರ್ಕಾರದ ಕಾಲೇಜನ್ನು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಪ್ಪಿಸಿ, ಅದರ



ಸಮಗ್ರ ಅಭಿವೃದ್ಧಿಯ ಜವಾಬ್ದಾರಿ ಹೊರಿಸಲಾಗಿದೆ. ನಿರೀಕ್ಷೆಗೂ ಮೀರಿ ಕಾಲೇಜನ್ನು ಅಭಿವೃದ್ಧಿಪಡಿಸಿ, ಶೈಕ್ಷಣಿಕವಾಗಿ ಈ ಭಾಗದ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು ಬದ್ಧವಾಗಿದೆ. ಯಾವುದೇ ರೀತಿಯ ತೊಂದರೆ ಆಗದಂತೆ ನಿರ್ವಹಣೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಈ ಭಾಗದ ಬಡ, ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಆಶಯಕ್ಕೆ, ಸಂಕಲ್ಪಕ್ಕೆ ಕಾಲೇಜು ನೆರವಾಗಿತ್ತು. ಆದರೆ ಅನಿವಾರ್ಯ ಕಾರಣದಿಂದ ಮುಚ್ಚುವ ಹಂತಕ್ಕೆ ಬಂದಾಗ ಸ್ಥಳೀಯರ ಹೋರಾಟಕ್ಕೆ ಸ್ಪಂದಿಸಿದ ಸರ್ಕಾರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡಿ ಸಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ, ಅವರ ಉನ್ನತ ಭವಿಷ್ಯಕ್ಕೆ ಮಾರ್ಗದರ್ಶಿಯಾಗುವ ರೀತಿಯಲ್ಲಿ ಬೆಳೆಸಲಾಗುವುದು. ಎಲ್ಲಾ ಮೂಲಸೌಲಭ್ಯಗಳನ್ನು ಒದಗಿಸಿ, ವಿದ್ಯಾರ್ಥಿಗಳ ಮತ್ತು ಪೋಷಕರ ಹಿತ ಕಾಪಾಡಲಾಗುವುದು. ಸರ್ಕಾರ ವಿಶ್ವವಿದ್ಯಾನಿಲಯದ ಮೇಲಿಟ್ಟಿರುವ ವಿಶ್ವಾಸಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಕಾರ್ಯ ನಿರ್ವಹಿಸಲಾಗುವುದು ಎಂದು ತಿಳಿಸಿದರು.

ಜಂಟಿ ನಿರ್ದೇಶಕ ವೀರಭದ್ರಯ್ಯ ಮಾತನಾಡಿದರು. ಕಾಲೇಜಿನ ವಿಶೇಷಾಧಿಕಾರಿ ಡಾ. ಬಸವರಾಜ್, ಕಾಲೇಜು ಜಮೀನಿನ ದಾನಿ ಗಾರೆಮನೆ ಶಿವಣ್ಣರೆಡ್ಡಿ, ಮೌನೇಶ್, ದಾವಣಗೆರೆ ದೃಶ್ಯಕಲಾ ಕಾಲೇಜಿನ ಪ್ರಾಚಾರ್ಯ ಡಾ. ರವೀಂದ್ರ ಕಮ್ಮಾರ್, ಸಹಾಯಕ ಪ್ರಾಧ್ಯಾಪಕ ಡಾ. ಸತೀಶ್‌ಕುಮಾರ್ ಪಿ. ವಲ್ಲೇಪುರೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಡ್ರಗ್ಸ್ ಮಾಫಿಯಾ: ಪ್ರಭಾವಗಳಿಗೆ ಮಣಿಯದೇ ಕಠಿಣ ಕ್ರಮಕ್ಕೆ ಆಗ್ರಹ

# ಡಿಸಿಗೆ ಬಿಜೆಪಿ ಯುವ ಮೋರ್ಚಾ ಮನವಿ

ದಾವಣಗೆರೆ, ಸೆ.11- ಡ್ರಗ್ಸ್ ಮಾಫಿಯಾದಲ್ಲಿ ಭಾಗಿಯಾದವರು ಯಾರೇ ಆಗಿದ್ದರೂ ಯಾವುದೇ ಒತ್ತಡ, ಪ್ರಭಾವಗಳಿಗೆ ಮಣಿಯದೇ ನಿಷ್ಪಕ್ಷಪಾತ ತನಿಖೆ ನಡೆಸಿ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ನಗರದಲ್ಲಿಂದು ಜಿಲ್ಲಾ ಬಿಜೆಪಿಯ ಯುವ ಮೋರ್ಚಾ ಘಟಕದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.



ರಾಜ್ಯ ಸರ್ಕಾರವು ಡ್ರಗ್ಸ್ ದಂಧೆಯ ವಿರುದ್ಧ ತೆಗೆದುಕೊಂಡಿರುವ ಕಠಿಣ ಕ್ರಮಗಳನ್ನು ಪ್ರಶಂಸಿಸಿದ ಮೋರ್ಚಾದ ಕಾರ್ಯಕರ್ತರು, ಇದೇ ರೀತಿ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರವು ಹಾಗೂ ಪೊಲೀಸ್ ಇಲಾಖೆ ಡ್ರಗ್ಸ್ ಮಾಫಿಯಾದ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಂಡು ಡ್ರಗ್ಸ್ ದಂಧೆಯನ್ನು ರಾಜ್ಯದಿಂದಲೇ ಮಟ್ಟ ಹಾಕಲು ಜಿಲ್ಲಾಡಳಿತ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಯುವ ಮೋರ್ಚಾದ ಅಧ್ಯಕ್ಷ ಆರ್.ಎಲ್. ಶಿವಪ್ರಕಾಶ್, ಗೌತಮ್ ಜೈನ್, ಜಿಲ್ಲಾ ಉಪಾಧ್ಯಕ್ಷ ಕೆ.ವಿ. ಗುರುರಾಜ್, ಶ್ರೀಕಾಂತ್ ನೀಲಗುಂದ, ಉತ್ತರ ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೇಕರ್, ದಕ್ಷಿಣ ಯುವ ಮೋರ್ಚಾ ಉಪಾಧ್ಯಕ್ಷ ಅಭಿಷೇಕ್ ಸೇರಿದಂತೆ ಇತರರು ಇದ್ದರು.

## ಟ್ರಸ್ಟ್‌ಗೆ 6 ಲಕ್ಷ ವಂಚನೆ

**(1ನೇ ಪುಟದಿಂದ)** ಮೊದಲ ಚೆಕ್ ಬಳಸಿ 2.5 ಲಕ್ಷ ರೂ.ಹಾಗೂ ಸೆಪ್ಟೆಂಬರ್ 8ರಂದು 3.5 ಲಕ್ಷ ರೂ. ಬಿಡಿಸಿಕೊಳ್ಳ ಲಾಗಿತ್ತು ಎಂದು ಎಫ್.ಐ.ಆರ್.ನಲ್ಲಿ ತಿಳಿಸಲಾಗಿದೆ. ಮೂರನೇ ನಕಲಿ ಚೆಕ್‌ನಲ್ಲಿ 9.86 ಲಕ್ಷ ರೂ. ಬಿಡಿಸಿಕೊಳ್ಳುವ ಯತ್ನ ನಡೆಸಲಾಗಿತ್ತು. ಚೆಕ್‌ಗೆ ಹಣ ನೀಡುವ ಬಗ್ಗೆ ಲಖ್ನೌದ ಎಸ್.ಬಿ.ಐ.ನ ಹಿರಿಯ ಅಧಿಕಾರಿಯೊಬ್ಬರು ರಾಯ್ ಅವರನ್ನು ಸಂಪರ್ಕಿಸಿದ್ದರು. ಆಗ ವಂಚನೆ ಬೆಳಕಿಗೆ ಬಂದಿದೆ.

ದೊಡ್ಡ ಮೊತ್ತದ ಚೆಕ್‌ಗಳಿಗೆ ಹಣ ನೀಡುವಾಗ ನಾವು ಗ್ರಾಹಕರಿಂದ ಖಚಿತಪಡಿಸಿಕೊಳ್ಳುತ್ತೇವೆ. ಈ ಸಂದರ್ಭದಲ್ಲಿ ವಂಚನೆ ಬೆಳಕಿಗೆ ಬಂದಿದೆ. ಮೊದಲಿನ ಎರಡು ಚೆಕ್‌ಗಳ ಸಂದರ್ಭದಲ್ಲೂ ಕರೆ ಮಾಡಿದ್ದೆವು ಎಂಬ ನಂಬಿಕೆ ಇದೆ. ಗ್ರಾಹಕರು ಕರೆ ಸ್ವೀಕರಿಸಿದ್ದರೇ ಎಂಬ ಬಗ್ಗೆ ಪರಿಶೀಲಿಸುತ್ತಿದ್ದೇವೆ ಎಂದು ಎಸ್.ಬಿ.ಐ. ಚೆಕ್ ವಿಲೇವಾರಿ ವಿಭಾಗದ ಉಪ ವ್ಯವಸ್ಥಾಪಕಿ ಮೋನಾ ರಸ್ತೋಗಿ ತಿಳಿಸಿದ್ದಾರೆ.

## ಎಪಿಎಂಸಿ ಅಧ್ಯಕ್ಷರ ಸಭೆ

**(1ನೇ ಪುಟದಿಂದ)** ಎಸ್.ಕೆ. ಚಂದ್ರಶೇಖರ್ ತಿಳಿಸಿ ದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಂದಿರುವ ಹೊಸ ತಿದ್ದುಪಡಿ ಕಾಯ್ದೆಗಳಿಂದ ಎಪಿಎಂಸಿಗಳು ನಿಷ್ಕ್ರಿಯವಾಗ ಲಿದ್ದು, ಕ್ರಮೇಣ ನಶಿಸಿ ಹೋಗುವ ಸಾಧ್ಯತೆ ಇದೆ.

ಹೀಗಾಗಿ ಪ್ರಸ್ತುತ ಕಾಯ್ದೆಗೆ ಸಡಿಲಿಕೆ ಮಾಡಬೇಕು ಹಾಗೂ ರೈತರ ಹಿತದೃಷ್ಟಿಯಿಂದ ಮಾರುಕಟ್ಟೆಯ ಹೊರಗೆ ಹಾಗೂ ಒಳಗೆ ಮಾಡುವ ವಹಿವಾಟುಗಳಿಗೆ ಯಾವುದೇ ವ್ಯತ್ಯಾಸ ಇಲ್ಲದಂತೆ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಮನವಿ ಸಲ್ಲಿಸಲು ಚರ್ಚೆ ನಡೆಸಲಾಗುವುದು ಎಂದವರು ಹೇಳಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಪಿಎಂಸಿ ವ್ಯವಸ್ಥೆಯಲ್ಲಿ ತಿದ್ದುಪಡಿ ಮಾಡಿದ್ದು, ಅದರ ಅನ್ವಯ ಪ್ರಾಂಗಣದ ಹೊರಗಡೆ ನಡೆಯುವ ವ್ಯಾಪಾರಕ್ಕೆ ಶುಲ್ಕ ಇರುವುದಿಲ್ಲ ಹಾಗೂ ನಿಯಂತ್ರಣವೂ ಇರುವುದಿಲ್ಲ. ಇದರಿಂದಾಗಿ ಎಪಿಎಂಸಿಗಳಿಗೆ ನಷ್ಟವಾಗುವುದ ರೊಂದಿಗೆ ರೈತರಿಗೆ ನೀಡುತ್ತಿರುವ ಸೌಲಭ್ಯ ಹಾಗೂ ವ್ಯವಸ್ಥೆಗಳು ಮಣ್ಣು ಪಾಲಾಗುತ್ತವೆ ಎಂದವರು ಕಳವಳ ವ್ಯಕ್ತಪಡಿಸಿದ್ದಾರೆ.

## ಕಾಂಗ್ರೆಸ್ : ಹುದ್ದೆಯಿಂದ ಖರ್ಗೆ ಹೊರಕ್ಕೆ

**(1ನೇ ಪುಟದಿಂದ)** ಪಾಟೀಲ್ ನೇಮಕಗೊಂಡಿದ್ದರೆ, ತಮಿಳುನಾಡು ಮತ್ತು ಪುದುಚೇರಿ ಕಾಂಗ್ರೆಸ್ ಉಸ್ತುವಾರಿಯಾಗಿ ದಿನೇಶ್ ಗುಂಡೂರಾವ್ ಅವರಿಗೆ ಜವಾಬ್ದಾರಿ ನೀಡಲಾಗಿದೆ. ಆಜಾದ್ ಹಾಗೂ ಶರ್ಮಾ ಕಾಂಗ್ರೆಸ್ ಕಾರ್ಯ ಕಾರಿಣಿ ಸಮಿತಿಯ ಸಾಮಾನ್ಯ ಸದಸ್ಯರಾಗಿ ಮುಂದುವರೆದಿದ್ದಾರೆ. ಜಿತಿನ್ ಪ್ರಸಾದ್ ಅವರನ್ನು ಕಾರ್ಯಕಾರಿಣಿಯ ಶಾಶ್ವತ ಆಹ್ವಾನಿತರಾಗಿ ನೇಮಿಸ ಲಾಗಿದೆ. ಅವರಿಗೆ ಪಶ್ಚಿಮ ಬಂಗಾಳದ ಉಸ್ತುವಾರಿಯನ್ನೂ ನೀಡಲಾಗಿದೆ.

## ನಗರದಲ್ಲಿ ಇಂದು ಪ್ರಶಸ್ತಿ ಪ್ರದಾನ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಶಿಕ್ಷಕರ ದಿನಾಚರಣೆ ಪ್ರಯುಕ್ತ ಆದರ್ಶ ಶಿಕ್ಷಕರಿಂದ ಆದರ್ಶ ಸಮಾಜ ರೂಪಿಸಲು ಸಾಧ್ಯ ಎಂದು ಕಾರ್ಯೋತ್ಸಾಹಿಯಾಗಿರುವ ಶಿಕ್ಷಕರಿಗೆ 'ಮಹಾತ್ಮ ಫುಲೆ' ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಡಾ. ಹೆಚ್.ವಿ. ವಾಮದೇವಪ್ಪ ಆಗಮಿಸಲಿದ್ದಾರೆ. ಎಂ.ಬಿ. ಪ್ರಭಾಕರ್, ವೀರೇಶ್ ಪ್ರಸಾದ್, ಬಸವನಗೌಡ, ಶ್ರೀಮತಿ ಹೆಚ್.ಆರ್. ವಿಶಾಲಾಕ್ಷಿ, ಶ್ರೀಮತಿ ಅನುಸೂಯ ಮಂಜುನಾಥ್, ಶ್ರೀಮತಿ ಆಶಾ ಬಿ. ಪಾಟೀಲ್ ಅವರನ್ನು ಸನ್ಮಾನಿಸಲಾಗುವುದು.


## ಅಭಿನಂದನೆಗಳು



ಭಾರತೀಯ ಜನತಾ ಪಾರ್ಟಿ
ದಾವಣಗೆರೆ
ಉತ್ತರ ವಿಧಾನಸಭಾ ಕ್ಷೇತ್ರದ
ಹಿಂದುಳಿದ ವರ್ಗಗಳ
ಮೋರ್ಚಾದ
ನೂತನ ಉಪಾಧ್ಯಕ್ಷರಾಗಿ
ಆಯ್ಕೆಯಾಗಿರುವ
**ಶ್ರೀಮತಿ ಶೋಭಾ ಶಿವಮೂರ್ತಿ**

ಇವರಿಗೆ ಹಾರ್ದಿಕ ಅಭಿನಂದನೆಗಳು.

✧ ಭರತ್‌ಕುಮಾರ್ ಟಿ.ಎಸ್., ಕನಕ ಟ್ರಾವೆಲ್ಸ್
✧ ಚಂದ್ರು, ಕನಕ ಡಿಜಿಟಲ್
✧ ಅಡವಿ ಎಂ.ಎಸ್., ನಿವೃತ್ತ ಕೃಷಿ ಇಲಾಖೆ
✧ ವೀಣಾ ಆನಂದ್, ಮರ್ಚೆಂಟ್ಸ್ ✧ ತಿಪ್ಪೇಸ್ವಾಮಿ, ಶಿಕ್ಷಕರು
✧ ಗಣೇಶ್ ಎಂ., ಆಗ್ರೋ ಸೀಡ್ಸ್ ✧ ಹೇಮಾವತಿ (ಕರಕುಶಲ)
✧ ಶೃತಿ ಮೋಹನ್ ಆಚಾರ್ ✧ ರೇಣುಕಾ ಮಾತಾಜಿ
✧ ಶಿರಿಶ್ ಮತ್ತು ಧಾತ್ವಿಕ್





## ಕ್ರಯಪತ್ರ ಕಳೆದಿದೆ

ಕೆ. ಚನ್ನಬಸಪ್ಪ ಬಿನ್ ಕೆ. ಕೊಟ್ರಪ್ಪ, ವಯಸ್ಸು 85 ವರ್ಷ, ದಾವಣಗೆರೆ ಸಿಟಿ, ಕೆ.ಬಿ. ಬಡಾವಣೆ, 4ನೇ ಕ್ರಾಸ್, ಡೋರ್ 583/1/2ರ ವಾಸಿಯಾದ ನಾನು ಈ ಮೂಲಕ ಪ್ರಮಾಣಪೂರ್ವಕವಾಗಿ ಹೇಳುವುದೇನೆಂದರೆ- ನಾನು ಮೇಲ್ಕಂಡ ವಿಳಾಸದ ವಾಸಿ ಇದ್ದೇನೆ. ನನ್ನ ಬಾಬ್ತು ನನ್ನ ಹೆಸರಿನಲ್ಲಿ ಶ್ರೀ ಎ. ಬೈಲಪ್ಪ ಇವರು ಬರೆದುಕೊಟ್ಟಿದ್ದ ಸ್ಥಿರ ಸೊತ್ತಿನ ಕ್ರಯಪತ್ರದ ರಿ.ನಂ. 1232/1964-65, ಬುಕ್-1, ವಾಲ್ಯೂಂ 925, ದಿ:: 30-7-1964 ಉಳ್ಳದ್ದು, ದಿ:: 8-9-2020ರಂದು ನಮ್ಮ ಬಡಾವಣೆಯಲ್ಲಿ, ನಾನು ಅಂಗಡಿಯಿಂದ ಮನೆಗೆ ಆಟೋ ರಿಕ್ಷಾದಲ್ಲಿ ವಾಪಾಸ್ಸು ಬರುವಾಗ ಕೈತಪ್ಪಿನಿಂದ ಬಿದ್ದು ಕಳೆದು ಹೋಗಿರುತ್ತದೆ. ಎಷ್ಟೇ ಪ್ರಾಮಾಣಿಕವಾಗಿ ಹುಡುಕಿದಾಗ್ಯೂ ಸಿಕ್ಕಿರುವುದಿಲ್ಲ. ನನ್ನ ಮೂಲ ಕ್ರಯಪತ್ರವು ಎಲ್ಲಿಯೂ ಸೆರೆಂಡರ್ ಮಾಡಿರುವುದಿಲ್ಲ. ಸಂಬಂಧಪಟ್ಟ ಕೆ.ಟಿ.ಜೆ. ನಗರ ಠಾಣೆಗೆ ದೂರು ಸಹ ನೀಡಿದ್ದೇನೆ. ಯಾರಿಗಾದರೂ ಸಿಕ್ಕಲ್ಲಿ ಕೆ.ಟಿ.ಜೆ. ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಿ : **9844426622, 9880014609**



## ಭಾವಪೂರ್ಣ ಶ್ರದ್ಧಾಂಜಲಿ


ಶ್ರೀ ಬಾಳೆಹೊಲದ ಮರುಳಸಿದ್ದಪ್ಪ


ಶ್ರೀ ಕೋಗುಂಡಿ ಬಸವರಾಜಪ್ಪ


ಶ್ರೀ ಹದಡಿ ನಟರಾಜ್


ಶ್ರೀಮತಿ ಕೆ.ಎಂ. ಉಮಾದೇವಿ


ಶ್ರೀ ಟಿ.ಎಸ್. ಬಕ್ಕೇಶ್

ನಮ್ಮನ್ನಗಲಿದ ಇವರುಗಳ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

✦ **ದೇವರಮನೆ ಶಿವಕುಮಾರ್**, ಅಧ್ಯಕ್ಷರು, ಜಿಲ್ಲಾ ಅಖಿಲ ಭಾರತ ವೀರಶೈವ ಮಹಾಸಭಾ
✦ **ದೇವರಮನೆ ಶಿವರಾಜ್**, ವೀರಶೈವ ಲಿಂಗಾಯತ ಸಮಾಜದ ಮುಖಂಡರು
✦ **ದೇವರಮನೆ ಮುರುಗೇಶ್**, ಅಧ್ಯಕ್ಷರು, ಕರ್ನಾಟಕ ಯೂತ್ಸ್ ಅಸೋಸಿಯೇಷನ್, ದಾವಣಗೆರೆ.



## ಭಾವಪೂರ್ಣ ಶ್ರದ್ಧಾಂಜಲಿ



ಲ॥ ಜಿ. ನಾಗನೂರು MJF


ಲ॥ ಡಾ॥ ಜಿ. ಮಂಜುನಾಥ ಗೌಡ

ನಮ್ಮನ್ನಗಲಿದ
ಜಿಲ್ಲಾ ಲಯನ್ಸ್ 324 ಡಿ4 ಮಾಜಿ ರಾಜ್ಯಪಾಲರೂ, ಸಮಾಜ ಸೇವಕರೂ, ನಮ್ಮ ಆತ್ಮೀಯರೂ ಆದ
**ಲ॥ ಜಿ. ನಾಗನೂರು** MJF ಅವರಿಗೂ,
ದಾವಣಗೆರೆ ವಿದ್ಯಾನಗರ ಲಯನ್ಸ್ ಮಾಜಿ ಅಧ್ಯಕ್ಷರೂ, ಸಾಮಾಜಿಕ ಸೇವಾ ಕಾರ್ಯಕರ್ತರೂ,
ಸಂಜೀವಿನಿ ಆಸ್ಪತ್ರೆಯ ಮುಖ್ಯಸ್ಥರೂ, ನಮ್ಮ ಆತ್ಮೀಯರೂ ಆದ
**ಲ॥ ಡಾ॥ ಜಿ. ಮಂಜುನಾಥ ಗೌಡ** ಅವರಿಗೂ
ನಮ್ಮ ಭಾವಪೂರ್ಣ ಶ್ರದ್ಧಾಂಜಲಿ.
ಇವರುಗಳ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರುಗಳ ಅಗಲಿಕೆಯ
ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

ಲ॥ ಡಾ॥ ಬಿ.ಎಸ್. ನಾಗಪ್ರಕಾಶ್ PMJF
ಡಾ॥ ಬಿ.ಎನ್. ಅಭಿಷೇಕ್ ಮತ್ತು ಆಡಳಿತ ಮಂಡಳಿ, ಸಿಬ್ಬಂದಿ ವರ್ಗ
**ಯುನಿಟಿ ಹೆಲ್ತ್ ಸೆಂಟರ್**, ಪಿ.ಜೆ. ಬಡಾವಣೆ, ಅಕ್ಕಮಹಾದೇವಿ ರಸ್ತೆ, ದಾವಣಗೆರೆ.



## ಜೇನು ಕಡಿತ: ಕಾರ್ಮಿಕ ಸಾವು



ದಾವಣಗೆರೆ, ಸೆ.11- ಜೇನು ಕಡಿತಕ್ಕೊಳಗಾದ ಕೂಲಿ ಕಾರ್ಮಿಕನೋರ್ವ ಚಿಕಿತ್ಸೆ ಫಲಿಸದೇ ಮೃತಪಟ್ಟಿರುವ ಘಟನೆ ಹದಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ತಾಲ್ಲೂಕಿನ ಗೋಪನಾಳ್ ಗ್ರಾಮದ ಬಿ.ಕೆ. ಕರಿಯಪ್ಪ ಮೃತ ದುರ್ದೈವಿ. ನಿನ್ನೆ ಗ್ರಾಮದ ಪೂಜಾರ್ ವೀರಭದ್ರಪ್ಪ ಎಂಬುವರ ಅಡಿಕೆ ತೋಟದಲ್ಲಿನ ಹಸಿ ಅಡಿಕೆ ಕೊಯ್ಯಲು ಮೃತ ಕರಿಬಸಪ್ಪ ಮುಂದಾಗಿದ್ದು, ಅಡಿಕೆ ಮರದಲ್ಲಿ ಜೇನು ಗೂಡು ಕಟ್ಟಿದ್ದು ಈತನಿಗೆ ಕಂಡಿಲ್ಲ. ಆದರೆ, ಅಡಿಕೆ ಗೊನೆ ಕೊಯ್ಯುತ್ತಿದ್ದಂತೆ ಕರಿಬಸಪ್ಪನ ಮೇಲೆ ಜೇನು ನೊಣಗಳು ದಾಳಿ ಮಾಡಿ ಗಂಭೀರವಾಗಿ ಗಾಯಗೊಳಿಸಿದ್ದವು.

ತಕ್ಷಣವೇ ಈತನನ್ನು ನಗರದ ಎಸ್ ಎಸ್ ಆಸ್ಪತ್ರೆಗೆ ದಾಖಲಿಸಿದರೂ ಸಹ ಚಿಕಿತ್ಸೆ ಫಲಿಸದೇ ಇಂದು ಮೃತಪಟ್ಟಿರುವುದಾಗಿ ಮೃತನ ಸಹೋದರ ಪೊಲೀಸ್ ಠಾಣೆಗೆ ನೀಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

## ರಾಜಾಭಕ್ಷಿ ನೇಮಕ



ದಾವಣಗೆರೆ, ಸೆ.11- ಜಿಲ್ಲಾ ಕಾಂಗ್ರೆಸ್ ಸೇವಾದಳ ಸಮಿತಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಬ್ಲಾಕ್ ಅಧ್ಯಕ್ಷರಾಗಿ ರಾಜಾಭಕ್ಷಿ ನೇಮಕಗೊಂಡಿದ್ದಾರೆ.


**NATIONAL TESTING AGENCY**
Excellence in Assessment
(An Autonomous Organization under the Department of Higher Education, Ministry of Education, GoI)

**NATIONAL ELIGIBILITY CUM ENTRANCE TEST NEET (UG) on 13th September 2020 (Sunday)**

**PUBLIC NOTICE**
**11th September 2020**

The NEET (UG) 2020 Examination is scheduled to be conducted on 13th September 2020, from 2.00 pm to 5.00pm (Sunday) in pen and paper mode on Pan India basis in 155 Cities across the country.

The "SOP issued by MoHFW on preventive measures will be followed by all concerned while conducting/appearing in examination to contain spread of COVID-19"

All Staff, students and parents will always:

- Practice physical distancing of at least 6 feet as far as possible;
- Mandatorily use face covers/masks;
- Practice frequent hand washing with soap (for at least 40-60 seconds) even when hands are not visible dirty. Use of alcohol-based hand sanitizers (for at least 20 seconds) can be made, wherever feasible.
- Strictly follow respiratory etiquette. This involves strict practice of covering one's mouth and nose while coughing/ sneezing with a tissue/ handkerchief/flexed elbow and disposing off used tissues properly;
- Self-monitor health by all and reporting any illness at the earliest;

Spitting shall be strictly prohibited. Installation & use of Aarogya Setu App is advised to all, as far as feasible.

Important Instructions for the exam and Advisories regarding COVID-19 have also been issued to the candidates in their respective Admit Cards. All candidates should download their *Latest Admit Card*, carefully read the Instructions and Advisories for COVID-19 given therein and strictly adhere to them.

As already mentioned in the Advisories to candidates regarding COVID -19 annexed with their Admit Card, they have to report as per the staggered time slots given in their respective Admit Cards, to avoid crowd at the examination centres.

Candidates will be allowed to carry only the following items with them into the examination venue:

- Admit Card along with Self Declaration/Undertaking (available on the Admit Card) regarding recent health status of the Candidate;
- Valid Government ID proof;
- Personal transparent water bottle;
- Additional passport size photograph (same as uploaded on application form) for pasting on attendance sheet;
- Personal hand sanitizer (50 ml);
- Mask and gloves;
- PwD Certificate, Scribe and Scribe related documents, if applicable.

Staggered Entry Time for candidates has been mentioned in the Admit card. Staggered Exit time will be decided by the Centre concerned. Candidates and parents will follow these timings strictly.

Senior Director, NTA

Address for communication:
Block C-20,1A/8, Sector 62, IITK Outreach Centre,
Gautam Buddh Nagar, Noida-201309, Uttar Pradesh (India)



# ಭದ್ರಾ ಬಹುತೇಕ ಭರ್ತಿ : ನದಿಗೆ ನೀರು ಬಿಡುಗಡೆ

ಶಿವಮೊಗ್ಗ, ಸೆ.11- ಭದ್ರಾ ಜಲಾಶಯವು ಗರಿಷ್ಠ ಮಟ್ಟ 186 ಅಡಿ ತಲುಪಲು ಒಂದೂವರೆ ಅಡಿ ಮಾತ್ರ ಬಾಕಿ ಇದ್ದು, ಜಲಾಶಯದ ಹಿತದೃಷ್ಟಿಯಿಂದ ಯಾವುದೇ ಕ್ಷಣದಲ್ಲಿ ಡ್ಯಾಂನಿಂದ ನದಿಗೆ ನೀರು ಹರಿಸುವ ಸಂಭವವಿದೆ.

ಈ ಕುರಿತು ಸೂಚನೆ ನೀಡಿರುವ ಭದ್ರಾ ಅಧೀಕ್ಷಕ ಇಂಜಿನಿಯರ್ ಅವರು, ಭದ್ರಾ ಜಲಾನಯನ ಪ್ರದೇಶದಲ್ಲಿ ಮಳೆ ಹೆಚ್ಚಾಗುವ ಸಾಧ್ಯತೆ ಇದ್ದು, ಜಲಾಶಯಕ್ಕೆ ಬರುತ್ತಿರುವ ಒಳಹರಿವಿನ ಪ್ರಮಾಣವೂ ಹೆಚ್ಚಾಗುತ್ತಿದೆ. ಆದ್ದರಿಂದ ಶುಕ್ರವಾರ ರಾತ್ರಿ ಅಥವಾ ಶನಿವಾರ ಬೆಳಿಗ್ಗೆ ಜಲಾಶಯದಿಂದ ಹೆಚ್ಚುವರಿ ನೀರನ್ನು ನದಿಗೆ ಬಿಡಲಾಗುವುದು. ತುಂಗಭದ್ರಾ ನದಿ ಪಾತ್ರದ ಜನರು ಈ ಕುರಿತು ಎಚ್ಚರಿಕೆ ವಹಿಸುವಂತೆ ಕೋರಿದ್ದಾರೆ.

ಶುಕ್ರವಾರ ಬೆಳಗಿನ ವರದಿ ಪ್ರಕಾರ ಜಲಾಶಯಕ್ಕೆ 2864 ಕ್ಯೂಸೆಕ್ಸ್ ಒಳಹರಿವು ಇದ್ದು, ನೀರಿನ ಮಟ್ಟ 184.6 ಇಂಚು ಆಗಿತ್ತು.

ಕಳೆದ ವರ್ಷ ಆಗಸ್ಟ್ 10 ರ ವೇಳೆಗೆ ಜಲಾಶಯ ಭರ್ತಿಯಾಗಿ, ನದಿಗೆ ನೀರು ಬಿಡಲಾಗಿತ್ತು. ಈ ವರ್ಷ ತಡವಾಗಿಯಾದರೂ ಜಲಾಶಯ ಭರ್ತಿಯಾಗಿರುವುದು ಅಚ್ಚುಕಟ್ಟಿನ ರೈತರಿಗೆ ಇನ್ನಿಲ್ಲದ ಸಂತಸ ತಂದಿದೆ. ಮಳೆಗಾಲದ ಬೆಳೆಯ ಜೊತೆಗೆ ಬೇಸಿಗೆ ಬೆಳೆಯನ್ನು ಬೆಳೆಯಬಹುದೆಂಬ ವಿಶ್ವಾಸದಲ್ಲಿ ಅಚ್ಚುಕಟ್ಟಿನ ರೈತರಿದ್ದಾರೆ.

# ಅರಕೇಶ್ವರ ದೇವಾಲಯದ ಮೂವರು ಅರ್ಚಕರ ಹತ್ಯೆ

ಬೆಂಗಳೂರು, ಸೆ. 11 – ಮಂಡ್ಯದ ಪ್ರಸಿದ್ಧ ಅರಕೇಶ್ವರ ದೇವಾಲಯದ ಮೂವರು ಪೂಜಾರಿಗಳನ್ನು ದರೋಡೆಕೋರರ ತಂಡ ಹತ್ಯೆಗೈದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೇವಾಲಯದ ಹುಂಡಿಯನ್ನು ದೋಚುವ ಸಲುವಾಗಿ ಗುರುವಾರ ದಾಳಿ ನಡೆಸಲಾಗಿತ್ತು. ನೋಟುಗಳನ್ನು ತೆಗೆದುಕೊಂಡು ಹೋಗಿರುವ ದರೋಡೆಕೋರರು, ನಾಣ್ಯಗಳನ್ನು ಬಿಟ್ಟಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ. ಈ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ್ದಾಗಿದೆ.

ಅರ್ಚಕರಾದ ಗಣೇಶ, ಪ್ರಕಾಶ ಹಾಗೂ ಆನಂದ ಅವರು ದೇವಾಲಯದ ಆವರಣದಲ್ಲೇ ಮಲಗಿದ್ದರು. ಆಗ ಅವರ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಐಜಿಪಿ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದು ಪರಿಶೀಲನೆ ನಡೆಸಿದ್ದಾರೆ. ಈ ನಡುವೆ, ಮೃತ ಅರ್ಚಕರ ಪ್ರತಿಯೊಬ್ಬರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

# ಜನಮುಖಿ ಕಾರ್ಯಗಳೇ ಒಂದು ಮಠ, ಪೀಠದ ನಿಜವಾದ ಅಸ್ತಿತ್ವ : ಶರಣರು

ಚನ್ನಗಿರಿ, ಸೆ. 11 - ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಆಡಳಿತಕ್ಕೆ ಒಳಪಟ್ಟ ಶಾಖಾಮಠವಾದ ಚನ್ನಗಿರಿಯ ಶ್ರೀ ಹಾಲಸ್ವಾಮಿ ವಿರಕ್ತಮಠದಲ್ಲಿ ಇಂದು ಡಾ. ಶಿವಮೂರ್ತಿ ಮುರುಘಾ ಶರಣರು ನೂತನ ಶ್ರೀಗಳಿಗೆ ಬಸವ ತತ್ವೋಪದೇಶ ಮತ್ತು ಸಮಾಜ ಸೇವಾ ದೀಕ್ಷೆ (ಚರಪಟ್ಟಾಧಿಕಾರ) ನೆರವೇರಿಸಿದರು.



ನಂತರ ಭಕ್ತರನ್ನುದ್ದೇಶಿಸಿ ಮಾತನಾಡಿದ ಶರಣರು, ಹಾಲಸ್ವಾಮಿ ವಿರಕ್ತ ಮಠದ ಲಿಂಗೈಕ್ಯ ಶ್ರೀ ಜಯದೇವ ಸ್ವಾಮಿಗಳ ಆಶಯದಂತೆ ಶ್ರೀ ಚಂದ್ರಮೋಹನ ದೇವರು ಅವರನ್ನು ಚನ್ನಗಿರಿ ವಿರಕ್ತಮಠಕ್ಕೆ ಡಾ. ಶ್ರೀ ಬಸವ ಜಯಚಂದ್ರ ಸ್ವಾಮಿಗಳು ಎಂಬ ನೂತನ ನಾಮಾಂಕಿತದೊಂದಿಗೆ ನೇಮಕ ಮಾಡಿ ಸಮಾಜ ಸೇವಾದೀಕ್ಷೆ (ಚರಪಟ್ಟಾಧಿಕಾರ) ಯನ್ನು ಅನುಗ್ರಹಿಸಲಾಗಿದೆ ಎಂದು ತಿಳಿಸಿದರು.

ಭಾರತೀಯ ಪರಂಪರೆಯಲ್ಲಿ ಅವಿಚ್ಛಿನ್ನವಾದ ಪರಂಪರೆ ಎಂದರೆ ಮಠ ಪರಂಪರೆ. ಇದು ತುಂಬಾ ಆಪ್ತವಾದ ಪರಂಪರೆಯಾಗಿದ್ದು, ಜೀವನವನ್ನು ಹದಗೊಳಿಸುವಂಥದ್ದು. ಜನಮುಖಿ ಕಾರ್ಯಗಳೇ ಒಂದು ಮಠ ಮತ್ತು ಪೀಠದ ನಿಜವಾದ ಅಸ್ತಿತ್ವ. ಅದುವೇ ಇತಿಹಾಸ. ಅಂತೆಯೇ ಜಂಗಮ ಸದಾ ಚಲನ ಶೀಲವಾಗಿರಬೇಕು. ಚಲನ ಶೀಲತೆಯೇ ಕ್ರಿಯಾಶೀಲತೆ. ಕ್ರಿಯಾಶೀಲತೆಯೇ ಜಂಗಮತ್ವ. ಕ್ರಿಯಾಶೀಲತೆಗೆ ಬದುಕು ಸಮರ್ಪಿಸುವವನೇ ನಿಜವಾದ ಸಾಧಕನಾಗಲು ಸಾಧ್ಯ ಎಂದು ಹೇಳಿದರು.

ಮಠ ಮತ್ತು ಘಟ ಇವೆರಡು ಒಂದಾಗಿ ಘಟಕವಾಗಬೇಕು. ಸ್ವಾಮಿಗಳು ಸಮಾಜದ ಮಕ್ಕಳು. ಅವರು ಸಮಾಜದ ಸ್ವಾಸ್ಥ್ಯಕ್ಕಾಗಿ ಬದುಕುತ್ತಾರೆ. ಸಮಾಜವೂ ಸಹ ಮಠದ ಜವಾಬ್ದಾರಿ ಹೊತ್ತುಕೊಳ್ಳಬೇಕು. ಸ್ವಾಮಿಗಳೂ ಸಹ ಪೂರ್ಣವಾದ ಮಠದ ಜವಾಬ್ದಾರಿ ತೆಗೆದುಕೊಳ್ಳಬೇಕು. ಗುರುಸಾಕ್ಷಿ, ಧರ್ಮಸಾಕ್ಷಿ, ದೈವಸಾಕ್ಷಿ ಸ್ವಾಮಿಗಳಿಗೆ ಬೇಕು. ಅಂತರ್ಮುಖಿ ಸಾಧನೆ ಮಾಡಬೇಕು. ಇದರಲ್ಲಿ ಪರಮಾನಂದ ಸಿಗುತ್ತದೆ. ಬಸವಣ್ಣ ಎಂದರೆ ಸಮೂಹ, ಸಮಾಜ. ಎಲ್ಲಾ ದೇಶಗಳ ಪಾರ್ಲಿಮೆಂಟ್‌ಗೆ ತಾಯಿ ಯಾವುದೆಂದರೆ ಬಸವಣ್ಣ ಸ್ಥಾಪಿಸಿದ ಅನುಭವ ಮಂಟಪ. ನಮ್ಮೆಲ್ಲರ ಆದರ್ಶ ಎಂದರೆ ಬಸವಣ್ಣನವರಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಕೊಳದ ಮಠದ ಡಾ. ಶಾಂತವೀರ ಮಹಾಸ್ವಾಮೀಜಿ, ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ರಾವಂದೂರು ಮುರುಘಾ ಮಠದ ಶ್ರೀ ಮೋಕ್ಷಪತಿ ಸ್ವಾಮೀಜಿ, ತಾವರೆಕೆರೆ ಶಿಲಾಮಠದ ಶ್ರೀ ಅಭಿನವ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಚನ್ನಗಿರಿ ಹಿರೇಮಠದ ಶ್ರೀ ಕೇದಾರಲಿಂಗ ಶಿವಶಾಂತವೀರ ಶಿವಾಚಾರ್ಯ ಸ್ವಾಮೀಜಿ, ಪಾಂಡೋಮಟ್ಟಿ ವಿರಕ್ತ ಮಠದ ಡಾ. ಶ್ರೀ ಗುರುಬಸವ ಸ್ವಾಮೀಜಿ, ಅಥಣಿ ಗಚ್ಚಿನಮಠದ ಶ್ರೀ ಶಿವಬಸವ ಸ್ವಾಮೀಜಿ, ದಾವಣಗೆರೆ ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ, ಹಾವೇರಿ ಹೊಸಮಠದ ಶ್ರೀ ಬಸವ ಶಾಂತಲಿಂಗ ಸ್ವಾಮೀಜಿ, ಬ್ಯಾಡಗಿ ಮುಪ್ಪಿನಸ್ವಾಮಿ ವಿರಕ್ತ ಮಠದ ಶ್ರೀ ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ತಿಳವಳ್ಳಿ ಕಲ್ಮಠದ ಶ್ರೀ ಬಸವ ನಿರಂಜನ ಸ್ವಾಮೀಜಿ, ನಿಪ್ಪಾಣಿ ಮುರುಘೇಂದ್ರ ಮಠದ ಶ್ರೀ ಬಸವ ಮಲ್ಲಿಕಾರ್ಜುನ ಸ್ವಾಮೀಜಿ, ನಾಗಗೊಂಡನಹಳ್ಳಿ ಚೆಲುಮೇರುದ್ರ ಸ್ವಾಮಿ ಮಠದ ಶ್ರೀ ಬಸವ ಕಿರಣ ಸ್ವಾಮೀಜಿ, ಕೊಡ್ಲಿಪೇಟೆ ಕಲ್ಲಳ್ಳಿಮಠದ ಶ್ರೀ ರುದ್ರಮುನಿಗಳು ಸ್ವಾಮೀಜಿ, ಗುಬ್ಬಿಯ ನಾಗರಾಜ ದೇವರು, ಧಾರವಾಡದ ಶಶಾಂಕ ದೇವರು, ಸದಾಶಿವಪೇಟೆ ಶ್ರೀಗಳು ಮತ್ತಿತರರು ಭಾಗವಹಿಸಿದ್ದರು.

# 2.40 ಟಿಎಂಸಿ ನೀರು ಮೀಸಲಿಗೆ ರಾಜ್ಯಪತ್ರದಲ್ಲಿ ಪ್ರಕಟಕ್ಕೆ ಒತ್ತಾಯ

**ಜಗಳೂರು**



ದಾವಣಗೆರೆ, ಸೆ.11- ಭದ್ರಾ ಮೇಲ್ದಂಡೆ ಯೋಜನೆಯಡಿ ತಜ್ಞರ ಸಮಿತಿ ಅಂತಿಮ ವರದಿಯಂತೆ ಜಗಳೂರು ತಾಲ್ಲೂಕಿಗೆ ಪ್ರತ್ಯೇಕವಾಗಿ 2.40 ಟಿಎಂಸಿ ನೀರು ಮೀಸಲಿಡುವ ವಿಚಾರವನ್ನು ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ತಜ್ಞರ ಸಮಿತಿ ಸದಸ್ಯ ಕೆ.ಬಿ. ಕಲ್ಲೇರುದ್ರೇಶ್ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದ್ದಾರೆ.

ತಜ್ಞರ ಸಮಿತಿ ವರದಿಯು ಮುಖ್ಯಮಂತ್ರಿಗಳಿಂದ ಅನುಮೋದಿಸಲ್ಪಟ್ಟು ಮುಖ್ಯ ಇಂಜಿನಿಯರ್‌ಗೆ ಕ್ರಮ ವಹಿಸಲು ನಿರ್ದೇಶಿಸಲಾಗಿತ್ತು. ಅದರಂತೆ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಜಗಳೂರು ತಾಲ್ಲೂಕಿಗೆ 2.40 ಟಿಎಂಸಿ ನೀರನ್ನು ಹಂಚಿಕೆ ಮಾಡುವ ಕುರಿತಂತೆ ಗೆಜೆಟ್ ನೋಟಿಫಿಕೇಷನ್ ಹೊರಡಿಸಬೇಕೆಂದು ಆಗ್ರಹಿಸಿದರು.

ಭದ್ರಾ ಮೇಲ್ದಂಡೆ ಯೋಜನೆಯಡಿ ತುಂಗಾ ಡ್ಯಾಮ್‌ನಿಂದ 17.4 ಟಿಎಂಸಿ ನೀರನ್ನು ಭದ್ರಾ ಡ್ಯಾಮ್‌ಗೆ ಲಿಫ್ಟ್ ಮಾಡಬೇಕು. ಭದ್ರಾ ಜಲಾಶಯದಿಂದ 12.5 ಟಿಎಂಸಿ ನೀರನ್ನು ಮಳೆಗಾಲದಲ್ಲಿ ಮೋಟಾರ್‌ಗಳ ಮೂಲಕ ಪಂಪ್ ಮಾಡಬೇಕು. ಆದರೆ ಈವರೆಗೂ ತುಂಗಾ ಡ್ಯಾಮ್‌ನಿಂದ ಭದ್ರಾ ಜಲಾಶಯಕ್ಕೆ ನೀರು ಬಂದಿಲ್ಲ. ಕೂಡಲೇ ಮೋಟಾರ್‌ಗಳನ್ನು ಚಾಲನೆ ಮಾಡಿ, ತುಂಗಾದಿಂದ ಭದ್ರಾಗೆ ನೀರು ಹರಿಸಬೇಕು. 28 ಟಿಎಂಸಿ ಸಾಮರ್ಥ್ಯದ ವಾಣಿವಿಲಾಸ ಸಾಗರವನ್ನು ತುಂಬಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

57 ಕೆರೆಗಳಿಗೆ ನೀರು ತುಂಬಿಸುವ ದೀಟೂರು ಏತ ನೀರಾವರಿ ಯೋಜನೆಯಲ್ಲಿ ತುಂಗಭದ್ರಾ ನದಿಯಿಂದ ಚಟ್ನಹಳ್ಳಿ ಗುಡ್ಡದವರೆಗೆ 200 ಮೀಟರ್ ವ್ಯಾಪ್ತಿಯಲ್ಲಿ ಏರ್ ವೆಸೆಲ್ ಮಾತ್ರ ಹಾಕಿರುವುದು ಸರಿಯಲ್ಲ. ಇದರಿಂದ ಒತ್ತಡ ಹೆಚ್ಚಾಗಿ, ಮೋಟಾರ್ ಕೆಟ್ಟರೆ ನೀರೆತ್ತಲು ತೊಂದರೆಯಾಗುತ್ತದೆ. ಆದ್ದರಿಂದ ರೈಸಿಂಗ್ ಮೇನ್‌ನಲ್ಲಿ ಐದಾರು ಏರ್ ವೆಸೆಲ್ ಟ್ಯಾಂಕ್‌ಗಳನ್ನು ನಿರ್ಮಿಸುವುದು ಸೂಕ್ತ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅಸಗೋಡು ಸುರೇಶ್, ಮಲ್ಲಿಗೌಡ್ರು, ಸಂಪತ್ ಕುಮಾರ್, ಕೆ.ಜಿ. ಪ್ರಭಾಕರ್ ಇದ್ದರು.

# ನಾಳೆ ರೈತ ಹುತಾತ್ಮರ ದಿನಾಚರಣೆ - ಸಮಾಧಿಗಳ ಸ್ಥಳಾಂತರ

ದಾವಣಗೆರೆ, ಸೆ.11- ರೈತ ಹುತಾತ್ಮರಾದ ಓಬೇನಹಳ್ಳಿ ಕಲ್ಲಿಂಗಪ್ಪ, ಸಿದ್ದನೂರು ನಾಗರಾಜಾಚಾರ್ ಅವರುಗಳ 28ನೇ ರೈತ ಹುತಾತ್ಮರ ದಿನಾಚರಣೆ ಹಾಗೂ ಸಮಾಧಿಗಳ ಸ್ಥಳಾಂತರ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 13ರ ಭಾನುವಾರ ತಾಲ್ಲೂಕಿನ ಆನಗೋಡು ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ ಅಧ್ಯಕ್ಷ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ ತಿಳಿಸಿದರು.

ಅಂದು ಬೆಳಿಗ್ಗೆ 11.30ಕ್ಕೆ ಆನಗೋಡು ಗ್ರಾಮದ ಉಳಪನಕಟ್ಟೆ ಕ್ರಾಸ್ ಬಳಿ ಇಂದಿರಾ ಪ್ರಿಯದರ್ಶಿನಿ ಪಾರ್ಕ್ ಪಕ್ಕದ ರೈತ ಹುತಾತ್ಮರ ಸಮಾಧಿ ಸ್ಥಳದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಸಮಾರಂಭ ನಡೆಯಲಿದೆ ಎಂದು ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಸೀಲ್ದಾರ್ ಗಿರೀಶ್, ಸಮಿತಿ ಗೌರವಾಧ್ಯಕ್ಷ ಆನಗೋಡು ಎಚ್.ನಂಜುಂಡಪ್ಪ, ಜಿಲ್ಲಾ ಪಂಚಾಯತ್ ಸದಸ್ಯ ಕೆ.ಎಸ್. ಬಸವಂತಪ್ಪ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಕೆ. ರವಿ, ಹುತಾತ್ಮ ಓಬೇನಹಳ್ಳಿ ಕಲ್ಲಿಂಗಪ್ಪನವರ ವಂಶಸ್ಥ ಓಬೇನಹಳ್ಳಿ ಮಂಜಪ್ಪ, ಸಿದ್ದನೂರು ರೇವಣಸಿದ್ದಪ್ಪನವರ ಸಿದ್ದನೂರು ನಾಗರಾಜಾಚಾರ್ ಹಾಗೂ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಆನಗೋಡು ಗ್ರಾಮದ ಹೃದಯ ಭಾಗದಲ್ಲಿದ್ದ ಈ ಇಬ್ಬರು ಹುತಾತ್ಮರ ಸಮಾಧಿಯನ್ನು ರಾಷ್ಟ್ರೀಯ ಹೆದ್ದಾರಿ-4ರ ಅಗಲೀಕರಣದ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಸಮೀಪದ ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ ಪಕ್ಕದ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

ಸರ್ಕಾರದಿಂದ 37 ಗುಂಟೆ ಜಮೀನು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹುತಾತ್ಮ ರೈತ ಹೋರಾಟಗಾರರ ಸ್ಮರಣಾರ್ಥ ಸಮುದಾಯ ಭವನ ನಿರ್ಮಿಸುವ ಉದ್ದೇಶವಿದೆ ಎಂದರು.

ರಸಗೊಬ್ಬರ ಬೆಲೆ ಏರಿಕೆ ವಿರುದ್ಧ ಸೆ.13, 1992ರಂದು ನಡೆದ ರೈತ ಹೋರಾಟದಲ್ಲಿ ಪೊಲೀಸರ ಗುಂಡೇಟಿಗೆ ಬಲಿಯಾದ ಹುತಾತ್ಮ ರೈತರ ಸ್ಮರಣೆಯನ್ನು ಕಳೆದ 28 ವರ್ಷಗಳಿಂದಲೂ ಮಾಡಿಕೊಂಡು ಬರುತ್ತಿದ್ದೇವೆ. ರಾಜ್ಯ ಸರ್ಕಾರ ರೈತರ ಬೆಳೆಗಳಿಗೆ ಉತ್ತಮ ಬೆಂಬಲ ನೀಡಿ, ರೈತರಿಗೆ ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ರಾಜ್ಯದಲ್ಲಿ ರೈತರ ಆತ್ಮಹತ್ಯೆ ಹೆಚ್ಚುತ್ತಿದ್ದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಹಿತ ಕಾಯಲು ಮುಂದಾಗಬೇಕು.

ಡಾ. ಎಂ.ಎಸ್. ಸ್ವಾಮಿನಾಥನ್ ರಾಷ್ಟ್ರೀಯ ಕೃಷಿ ಆಯೋಗದ ವರದಿ ಜಾರಿಗೊಳಿಸಲು ಸರ್ಕಾರ ಮೀನಾ ಮೇಷ ಎಣಿಸುತ್ತಿರುವುದು ಸರಿಯಲ್ಲ. ಮೆಕ್ಕೆಜೋಳ, ಭತ್ತ ಸೇರಿದಂತೆ ರೈತರ ಕೃಷಿ ಉತ್ಪನ್ನಗಳಿಗೆ ಬೆಲೆ ನೀತಿ ಜಾರಿಗೊಳಿಸುವ ಕೆಲಸ ಆಗಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಿತಿ ಮುಖಂಡರಾದ ಹೊನ್ನೂರು ಮುನಿಯಪ್ಪ, ಆವರಗೆರೆ ರುದ್ರಮುನಿ, ಶಾಬನೂರು ಹೆಚ್.ಆರ್. ಲಿಂಗರಾಜ್ ಸೇರಿದಂತೆ ಇತರರು ಇದ್ದರು.

## ಕೈಗಾರಿಕಾ ಉತ್ಪನ್ನ ಶೇ.10.4ರ ಇಳಿಕೆ

ನವದಹೆಲಿ, ಸೆ. 11 – ಜುಲೈ ತಿಂಗಳಲ್ಲಿ ಕೈಗಾರಿಕಾ ಉತ್ಪನ್ನ ಶೇ.10.4ರಷ್ಟು ಇಳಿಕೆಯಾಗಿದೆ. ಉತ್ಪಾದನಾ ವಲಯ, ಗಣಿ ಹಾಗೂ ವಿದ್ಯುತ್ ಉತ್ಪಾದನೆಯ ಹಿನ್ನಡೆ ಇದಕ್ಕೆ ಕಾರಣವಾಗಿದೆ. ಕೈಗಾರಿಕಾ ಉತ್ಪನ್ನ ಸೂಚ್ಯಂಕದ ಪ್ರಕಾರ, ಉತ್ಪಾದನಾ ವಲಯ ಶೇ.11.1ರ ಕುಸಿತ ಕಂಡಿದೆ. ಗಣಿ ವಲಯ ಶೇ.13 ಹಾಗೂ ವಿದ್ಯುತ್ ವಲಯ ಶೇ.2.5ರ ಕುಸಿತ ಕಂಡಿದೆ.

# ಆಯುಷ್ ಕೋವಿಡ್ ಆಸ್ಪತ್ರೆಗೆ ಪ್ರಸ್ತಾವನೆ

**ಆಯುಷ್ ವೈದ್ಯಾಧಿಕಾರಿ ಡಾ. ಶಂಕರ ಗೌಡ**

ದಾವಣಗೆರೆ, ಸೆ. 11 - ಕೊರೊನಾ ಸೋಂಕಿತರಿಗೆ ಆಯುರ್ವೇದದ ಮೂಲಕ ಚಿಕಿತ್ಸೆ ನೀಡಲು ಆಯುಷ್ ಕೋವಿಡ್ ಸೆಂಟರ್‌ಗೆ ಪ್ರಸ್ತಾವನೆ ರೂಪಿಸಲಾಗುತ್ತಿದೆ ಎಂದು ಆಯುಷ್ ವೈದ್ಯಾಧಿಕಾರಿ ಡಾ. ಶಂಕರ ಗೌಡ ತಿಳಿಸಿದ್ದಾರೆ.


ಜಿಲ್ಲಾ ಪಂಚಾಯ್ತಿ ಕೆಡಿಪಿ ಸಭೆಯಲ್ಲಿ ಮಾತನಾಡುತ್ತಿದ್ದ ಅವರು, 50 ಹಾಸಿಗೆಗಳ ಕೇಂದ್ರವೊಂದನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಪ್ರಸ್ತಾವನೆಗೆ ಜಿಲ್ಲಾಧಿಕಾರಿಗಳ ಒಪ್ಪಿಗೆ ಬೇಕಿದೆ. ಸ್ಥಾಪನೆಯಾದಲ್ಲಿ ಈ ಕೇಂದ್ರ ರಾಜ್ಯದಲ್ಲೇ ಮೊದಲ ಆಯುಷ್ ಕೋವಿಡ್ ಘಟಕವಾಗಲಿದೆ ಎಂದರು.

ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡಲು ಆಯುಷ್ ಇಲಾಖೆಯು ಈಗಾಗಲೇ ಆಯುರ್ವೇದ ಶಿಷ್ಟಾಚಾರ ರೂಪಿಸಿದೆ. ಯೋಗ ಶಿಷ್ಟಾಚಾರವನ್ನೂ ಸಹ ರೂಪಿಸಲಾಗಿದೆ. ಇದನ್ನು ಬಳಸಿಕೊಂಡು ಸೋಂಕಿತರಿಗೆ ಚಿಕಿತ್ಸೆ ನೀಡಲಾಗು ವುದು ಎಂದವರು ಹೇಳಿದರು.

ಲಘು ಲಕ್ಷಣಗಳಿರುವ ಸೋಂಕಿತರಿ ಗೆ ಆಯುಷ್ ಕೋವಿಡ್ ಸೆಂಟರ್ ಮೂಲಕ ಚಿಕಿತ್ಸೆ ಕೊಡಿಸಬಹುದಾಗಿದೆ. ಈ ಆಯುರ್ವೇದ ಚಿಕಿತ್ಸಾ ಘಟಕ ದಾವಣಗೆರೆಯಲ್ಲೇ ಇರಬೇಕಿದೆ. ಈ ಘಟಕವು ಕೋವಿಡ್ ಆಸ್ಪತ್ರೆಗೆ ನಿಕಟವಾಗಿದ್ದರೆ, ಯಾರಾದರೂ ತೀವ್ರ ಅಸ್ವಸ್ಥಗೊಂಡರೆ ಅವರನ್ನು ಕೋವಿಡ್ ಆಸ್ಪತ್ರೆಗೆ ದಾಖಲಿಸಬಹುದು ಎಂದವರು ವಿವರಿಸಿದರು.

ಘಟಕಗಳ ನಿರ್ವಹಣೆಗಾಗಿ ಖಾಸಗಿ ಆಯುರ್ವೇದ ಕಾಲೇಜುಗಳ ವೈದ್ಯಕೀಯ ಸಿಬ್ಬಂದಿಯನ್ನೂ ಸಹ ಬಳಸಿಕೊಳ್ಳಬಹುದಾಗಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.ೊ ಕೊರೊನಾ ಸೋಂಕಿತರಿಗೆ ಆಯುಷ್ ಇಲಾಖೆಯ ಮೂಲಕ ರೋಗ ನಿರೋಧಕತೆ ಹೆಚ್ಚಿಸುವ ಬೂಸ್ಟರ್‌ಗಳನ್ನು ನೀಡಲಾಗುತ್ತಿದೆ. ಈ ದಾಸ್ತಾನು ಖಾಲಿಯಾಗಿದ್ದು, ಹೆಚ್ಚಿನ ದಾಸ್ತಾನಿಗೆ ಮನವಿ ಸಲ್ಲಿಸಲಾಗಿದೆ ಎಂದು ಡಾ. ಗೌಡ ಹೇಳಿದರು.

# 297 ದೃಢ, 274 ಬಿಡುಗಡೆ




ದಾವಣಗೆರೆ, ಸೆ. 11- ಜಿಲ್ಲೆಯಲ್ಲಿ ಶುಕ್ರವಾರ 297 ಕೊರೊನಾ ಪಾಸಿಟಿವ್ ಪ್ರಕರಣಗಳು ದೃಢಪಟ್ಟ ಬಗ್ಗೆ ವರದಿಯಾಗಿದೆ. ಹರಿಹರ ವಿಜಯ ನಗರ ಬಡಾವಣೆಯ 64 ವರ್ಷದ ಪುರುಷ ಸೋಂಕಿನಿಂದ ಮೃತಪಟ್ಟಿದ್ದಾರೆ.

274 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದು, ಇಲ್ಲಿಯವರೆಗೆ ಜಿಲ್ಲೆಯಲ್ಲಿ 12486 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಒಟ್ಟು 2775 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 129, ಹರಿಹರ 37, ಜಗಳೂರು 11, ಚನ್ನಗಿರಿ 43, ಹೊನ್ನಾಳಿ 53 ಹಾಗೂ ಹೊರ ಜಿಲ್ಲೆಯ 24 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

## ರಂಭಾಪುರಿ ಜಗದ್ಗುರುಗಳು ಬಿಡುಗಡೆ



ಬೆಂಗಳೂರು / ರಂಭಾಪುರಿ ಪೀಠ (ಬಾಳೆಹೊನ್ನೂರು), ಸೆ. 11- ಕೊರೊನಾ ಸೋಂಕಿನಿಂದ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶ್ರೀ ರಂಭಾಪುರಿ ಪೀಠದ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಸಂಪೂರ್ಣ ಗುಣಮುಖರಾಗಿದ್ದು, ಇಂದು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದಾರೆ. ಕಾರಣ ಭಕ್ತಾದಿಗಳು ಆತಂಕ ಪಡುವ ಕಾರಣವಿಲ್ಲ. ವೈದ್ಯರ ಸಲಹೆಯಂತೆ ವಿಶ್ರಾಂತಿ ಅವಶ್ಯಕತೆಯಿರುವುದರಿಂದ ಅವರು ಏಕಾಂತ ಸ್ಥಳಕ್ಕೆ ತೆರಳಿದರೆಂದು ಶ್ರೀ ಪೀಠದ ಪ್ರಕಟಣೆ ತಿಳಿಸಿದೆ.

## ಕೇಂದ್ರ ಸಚಿವ ಸುರೇಶ್ ಅಂಗಡಿಗೆ ಕೊರೊನಾ

ನವದೆಹಲಿ, ಸೆ. 11 – ಕೇಂದ್ರ ರೈಲ್ವೆ ಖಾತೆ ಅಧೀನ ಸಚಿವ ಸುರೇಶ್ ಅಂಗಡಿ ಅವರಿಗೆ ಕೊರೊನಾ ಸೋಂಕು ಬಂದಿದ್ದು, ಅವರನ್ನು ಏಐಐಎಂಎಸ್‌ಗೆ ದಾಖಲಿಸಲಾಗಿದೆ.

65 ವರ್ಷದ ಅಂಗಡಿ ಅವರನ್ನು ಶುಕ್ರವಾರ ಸಂಜೆ 6.30ಕ್ಕೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಮೂಲಗಳು ತಿಳಿಸಿವೆ.

ಇದಕ್ಕೂ ಮುಂಚೆ ಟ್ವೀಟ್ ಮಾಡಿದ್ದ ಅಂಗಡಿ, ತಮಗೆ ಸೋಂಕು ಬಂದಿರುವುದನ್ನು ತಿಳಿಸಿದ್ದರು. ಕಳೆದ ಕೆಲ ದಿನಗಳಲ್ಲಿ ತಮ್ಮ ಸಂಪರ್ಕಕ್ಕೆ ಬಂದಿರುವವರು ಆರೋಗ್ಯದ ಬಗ್ಗೆ ನಿಗಾ ವಹಿಸಬೇಕು ಹಾಗೂ ರೋಗ ಲಕ್ಷಣಗಳು ಕಂಡು ಬಂದರೆ ತಪಾಸಣೆಗೆ ಒಳಪಡಬೇಕು ಎಂದು ಹೇಳಿದ್ದರು.

## ಮಲೇಬೆನ್ನೂರು ಹೋಬಳಿಯಲ್ಲಿ 24 ಜನರಿಗೆ ಪಾಸಿಟಿವ್

ಮಲೇಬೆನ್ನೂರು, ಸೆ.11- ಶುಕ್ರವಾರ ಮಲೇಬೆನ್ನೂರು ಹೋಬಳಿಯಲ್ಲಿ 24 ಜನರಿಗೆ ಕೊರೊನಾ ಪಾಸಿಟಿವ್ ದೃಢಪಟ್ಟಿದೆ. ಜಿ. ಬೇವಿನಹಳ್ಳಿಯಲ್ಲಿ ಆರು ಜನರಿಗೆ, ಮಲೇಬೆನ್ನೂರಿನಲ್ಲಿ ನಾಲ್ವರಿಗೆ, ಹಾಲಿವಾಣದಲ್ಲಿ ನಾಲ್ವರಿಗೆ, ಕೊಕ್ಕನೂರಿನಲ್ಲಿ ಮೂವರಿಗೆ ಮತ್ತು ಜಿ.ಟಿ. ಕಟ್ಟೆಯಲ್ಲಿ ಇಬ್ಬರಿಗೆ ಹಾಗೂ ಹಳ್ಳಿಹಾಳ್, ಬೂದಿಹಾಳ್, ಭಾನುವಳ್ಳಿ, ಮಲ್ಲನಾಯ್ಕನಹಳ್ಳಿ ಗ್ರಾಮಗಳ ತಲಾ ಒಬ್ಬರಿಗೆ ಸೋಂಕು ತಗುಲಿದೆ.

## ಸಾಮಾಜಿಕ ಕಾರ್ಯಕರ್ತ ಅಗ್ನಿವೇಶನ ನಿಧನ

ನವದೆಹಲಿ, ಸೆ. 11 – ಸುದೀರ್ಘ ಕಾಲದಿಂದ ಲಿವರ್ ಸಿರೋಸಿಸ್‌ನಿಂದ ಬಳುತ್ತಿದ್ದ ಸಾಮಾಜಿಕ ಕಾರ್ಯಕರ್ತ ಸ್ವಾಮಿ ಅಗ್ನಿವೇಶ್ ನಿಧನರಾಗಿದ್ದಾರೆ. ಅವರಿಗೆ 80 ವರ್ಷ ವಯಸ್ಸಾಗಿತ್ತು.

ಶನಿವಾರ ಬೆಹೆಲ್ವಾದಲ್ಲಿರುವ ಅಗ್ನಿಲೋಕ್ ಆಶ್ರಮದಲ್ಲಿ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು. ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವರು ಅಗಲಿದ ಅಗ್ನಿವೇಶ್ ಅವರಿಗಿ ಸಂತಾಪ ಸೂಚಿಸಿದ್ದಾರೆ.

## ಹೊನ್ನಾಳಿಗೆ ಇಂದು ಡಿಸಿಎಂ ಕಾರಜೋಳ

ಉಪ ಮುಖ್ಯಮಂತ್ರಿಯೂ ಗೋವಿಂದ ಎಂ ಕಾರಜೋಳ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 9.30ಕ್ಕೆ ನಗರದಿಂದ ಹೊರಟು ಹೊನ್ನಾಳಿ ತಲುಪಿ, 10.30ಕ್ಕೆ ಹೊನ್ನಾಳಿಯ ಕೃಷಿ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುವ ಕಾಮಗಾರಿಗಳ ಶಂಕು ಸ್ಥಾಪನೆ ಹಾಗೂ ಉದ್ಘಾಟನೆಯಲ್ಲಿ ಭಾಗವಹಿಸು ವರು. ನಂತರ ಮಧ್ಯಾಹ್ನ 2.30ಕ್ಕೆ ಹೊನ್ನಾಳಿಯಿಂದ ಹೊರಟು ದಾವಣಗೆರೆ ತಲುಪಿ, ಜಿಲ್ಲಾ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 2.30ಕ್ಕೆ ಹೊನ್ನಾಳಿಯಿಂದ ಹೊರಟು ದಾವಣಗೆರೆ ತಲುಪಿ, ಜಿಲ್ಲಾ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು.





**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

ದಾವಣಗೆರೆ ಜಿಲ್ಲೆ, ತಾಲ್ಲೂಕು
ಹಳೇಕುಂದುವಾಡ ಗ್ರಾಮದ ವಾಸಿ,
ಶ್ರೀ ಪಟೇಲ್ ಸಿದ್ದನಗೌಡ್ರು ಮತ್ತು
ಮಕ್ಕಳು ಹಾಗೂ ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 29.08.2020ರ ಶನಿವಾರ
ಸಂಜೆ 6 ಗಂಟೆಗೆ ನನ್ನ ಧರ್ಮಪತ್ನಿ

**ಶ್ರೀಮತಿ ದ್ರಾಕ್ಷಾಯಣಮ್ಮನವರು**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 13.09.2020ರ ಭಾನುವಾರ ಬೆಳಿಗ್ಗೆ 10.30ಕ್ಕೆ
ಹಳೇಕುಂದುವಾಡ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು
ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಪಟೇಲ್ ವಂಶಸ್ಥರು, ಹಳೇಕುಂದುವಾಡ ಹಾಗೂ ಅಪಾರ ಬಂಧು-ಬಳಗ
ಮೊ. : 96115 80395, 99009 50948, 99866 47024


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte